ಈ ಸಭೆಟ್ ಪಾಲ್ ಪಡೆಯಿನಕುಲು: ಪ್ರೊ. ಬಿ. ಎ. ವಿವೇಕ ರೈ, ಡಾ. ವಾಮನ ನಂದಾವರ, ಡಾ. ಪಾಲ್ತಾಡಿ ರಾಮಕೃಷ್ಣ ಆಚಾರ್, ಶ್ರೀಮತಿ ಕೆ. ಲೀಲಾವತಿ, ಶ್ರೀ ವೆಂಕಟರಾಜ ಪುಣಿಂಚಿತ್ತಾಯ, ಶ್ರೀ ದಾಮೋದರ ನಿಸರ್ಗ, ಶ್ರೀ ಅಡ್ಯಾರು ಮಹಾಬಲ ಶೆಟ್ಟಿ, ಶ್ರೀ ಎಸ್. ಎ. ಕೃಷ್ಣಯ್ಯ ಪ್ರೊ. ಮುರಳೀಧರ ಉಪಾಧ್ಯ, ಶ್ರೀ ಹರೀಶ್ ಹೆಗ್ಡೆ, ಶ್ರೀ ಪಿ. ಕಮಾಲಾಕ್ಷ, ಶ್ರೀಮತಿ ಜಾನಕಿ ಬ್ರಹ್ಮಾವರ, ಶ್ರೀಮತಿ ಅಮೃತಾ ಡೀಕಯ್ಯ, ಶ್ರೀ ವಿಠಲ ಕಬಕ, ಶ್ರೀ ಎಂ. ವಿಠಲ ಪುತ್ತೂರು, ಶ್ರೀ ಚಂದ್ರಹಾಸ ಕಣಂತೂರು, ಶ್ರೀ ಭಾಸ್ಕರ ಕುಲಾಲ್ ಬರ್ಕೆ, ಶ್ರೀ ಭೋಜರಾಜ ಕಡಂಬ, ಶ್ರೀ ಕೆಲಿಂಜ ಸೀತಾರಾಮ ಆಳ್ವ, ಶ್ರೀ ತುಕಾರಾಂ ಪೂಜಾರಿ, ಶ್ರೀ ಗಂಗಾಧರ ಕಿದಿಯೂರು, ಶ್ರೀ ಗಣೇಶ ಪ್ರಸಾದ್ ಪಾಂಡೇಲು, ಶ್ರೀ ಪಿ. ಎಸ್. ರಾವ್, ಶ್ರೀ ಎಂ. ನಾರಾಯಣ ದೇವಾಡಿಗ.

ಅಕಾಡೆಮಿದ ರಿಜಿಸ್ಟ್ರಾರ್ ಡಾ. ಪಾಲ್ತಾಡಿ ರಾಮಕೃಷ್ಣ ಆಚಾರ್ ಸುರುಟು ಸಭೆನ್ ಎದಿಕೊಂಡೆರ್. ಅಕಾಡೆಮಿದ ಸದಸ್ಯೆ ಶ್ರೀಮತಿ ಕೆ. ಲೀಲಾವತಿ ಅಕೇರಿಗ್ ಸೊಲ್ಮೆ ಸಂದಾಯೆರ್.

ತುಳು ಕೊಂಕಣಿ ಬಾಂಧವ್ಯ

27 ಜುಲಾಯಿ 1997

ಸಮಾಜೊಡ್ದು ಬಾಸೆ ಪುಟ್ಟುಂಡು ಅತ್ತಂದೆ ಬಾಸೆಡ್ದ್ ಸಮಾಜ ಪುಟ್ಟುಜಿ. ನರಮಾನ್ಯ ಬಾಸೆ ಎಚ್ಚಿಕಮ್ಮಿ ಒಂಜೇ ಆಂಡಲಾ ಸಾಮಾಜಿಕ ಪರಿಸರೊಡ್ದಾದ್ ವ್ಯತ್ಯಾಸ ಪಡೆಮುಪ್ಪುಂಡು. ಭಾಷಾ ಎತ್ಯಾಸಿಲೆ ಉಳಮರ್ಗಿಲ್‌ಡ್ ಸಾಮಾನ್ಯತೆನೇ ಭಾಷಾ ಬಾಂಧವ್ಯದ ತಿರ್ಲ್ಂದ್ ಡಾ. ವಿಲಿಯಂ ಮಾಡ್ತಾ ಅಭಿಪ್ರಾಯ ಕೊರ್ಯೆರ್. ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ಬೊಕ್ಕ ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿದ ಜಂಟಿ ಸೇರಿಗೆಡ್ ಬಂಟಾಳ್‌ದ ಶ್ರೀ ಯಶವಂತ ವ್ಯಾಯಾಮ ಶಾಲೆಡ್ ನಡತ್ತಿನ ತುಳು ಕೊಂಕಣಿ ಬಾಂಧವ್ಯದ ಉದಿಪನ ಕೂಟದ ಗುರ್ಕ್ಯಾರ್ಮೆಡ್ ಆರ್ ಇಂಚ ಪಂಡೆರ್. ಶ್ರೀ ಏರ್ಯ ಲಕ್ಷ್ಮೀನಾರಾಯಣ ಆಳ್ವೆರ್ ದೀಪ ಪೊತ್ತಾದ್ ಕೂಟೊನು ಉದಿಪನ ಮಲ್ತೆರ್. ಡಾ. ಅಮ್ಮೆಂಬಳ ಬಾಳಪ್ಪೆರ್ ಮಲ್ಲಬಿನ್ನೆರಾದ್ ತುಳು ಅಕಾಡೆಮಿದ ತ್ರೈಮಾಸಿಕ ಮದಿಪುದ 5ನೇ ಸಂಚಿಕೆನ್ ಬುಡುಗಡೆ ಮಲ್ತೆರ್.

ಶ್ರೀ ರಾಘವೇಂದ್ರ ರಾವ್ ಕೊಂಕಣಿ ಪದ ಬೊಕ್ಕ ಸುರೇಶ ಕವತ್ತಾರು, ನವೀನ ಕುಮಾರ್ ಜೈನ್ ತುಳು ಪದ ಪಂಡ್‌ದ್ ಕೂಟ ಸುರು ಮಲ್ತ್‌ಕೊರ್ಯೆರ್. ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿದ ಗುರ್ಕಾರ್ ಶ್ರೀ ಬಸ್ತಿ ವಾಮನ ಶೆಣೈ ಎದಿಕೊಂಡೆರ್. ತುಳು ಸಾಹಿತ್ಯ ಅಕಾಡೆಮಿದ ಗುರ್ಕಾರ್ ಪ್ರೊ. ಬಿ.ಎ. ವಿವೇಕ ರೈಕುಳು ಪ್ರಾಸ್ತಾವಿಕ ಭಾಷಣ ಮಲ್ತೆರ್. ಕೊಂಕಣಿ ಸಾಹಿತ್ಯ ಅಕಾಡೆಮಿದ ರಿಜಿಸ್ಟ್ರಾರ್ ಎಂ. ಎಸ್. ಚಂದ್ರಪ್ಪೆರ್ ಸೊಲ್ಮೆ ಸಂದಾಯೆರ್. ಡಾ. ವಾಮನ ನಂದಾವರ ಕೂಟ ಸುಧಾರಿಕೆ ಮಲ್ತೆರ್.

ತುಳು ಕೊಂಕಣಿ ಬಾಸೆ ಬೊಕ್ಕ ವಿಚಾರಗೋಷ್ಠಿಡ್ ಪ್ರೊ. ಮುರಳೀಧರ ಉಪಾಧ್ಯ ಹಿರಿಯಡ್ಕ (ತುಳು ಕೊಂಕಣಿ ಸಾಹಿತ್ಯ ಸಂಬಂಧ), ರೆ. ಫಾ. ಹೆನ್ರಿ ಡಿ'ಸೋಜಾ (ತುಳು ಕೊಂಕಣಿ ಸಾಂಸ್ಕೃತಿಕ ಸಂಬಂಧ) ಪ್ರಬಂಧ ಮಂಡನೆ ಮಲ್ತೆರ್. ಹಿರಿಯ ಸಂಶೋಧಕೆರ್ ಶ್ರೀ ಎಂ. ಮುಕುಂದ ಪ್ರಭು ಗೋಷ್ಠಿದ ಗುರ್ಕ್ಯಾರ್ಮೆ ವಹಿಸ್ಯೆರ್. ಪ್ರೊ. ಅಮೃತ ಸೋಮೇಶ್ವರೆರ್ ಕೂಟ ಸುಧಾರಿಕೆ ಮಲ್ತೆರ್. ಮಧ್ಯಾಹ್ನಾಡ್ದ್ ಬೊಕ್ಕ ಶ್ರೀ ಬಿ. ಎಂ. ಇದಿನಬ್ಬೆರೆನ ಗುರ್ಕ್ಯಾರ್ಮೆಡ್ ನಡತ್ತಿ ಕವಿಗೋಷ್ಠಿಡ್ ಶ್ರೀ ಈಶ್ವರ ಭಟ್ ಪುತ್ತಿಗೆ (ತುಳು), ಶ್ರೀಮತಿ ವಸಂತಿ ಆರ್. ನಾಯಕ್ (ಕೊಂಕಣಿ), ಶ್ರೀಮತಿ ಕ್ಯಾಥರಿನ್ ರೋಡ್ರಿಗಸ್ (ತುಳು), ಶ್ರೀ ಮಾವುರಿಸ್ ಶಾಂತಿಪುರ (ಕೊಂಕಣಿ), ಶ್ರೀ ತಿಲಕನಾಥ ಮಂಜೇಶ್ವರ (ತುಳು), ಶ್ರೀ ಎಚ್. ರಾಘವೇಂದ್ರ ರಾವ್ (ಕೊಂಕಣಿ), ಶ್ರೀಮತಿ ದೇವಿಕಾ ನಾಗೇಶ್ (ತುಳು), ಶ್ರೀ ಆನ್ಸಿ ಪಾಲಡ್ಕ (ಕೊಂಕಣಿ), ಶ್ರೀ ಜೊಸ್ಸಿ ಪಿಂಟೊ (ಕೊಂಕಣಿ), ಶ್ರೀಮತಿ ಕೆ. ಲೀಲಾವತಿ (ತುಳು) ಕಬಿತೆಲೆನ್ ಓದಿಯೆರ್.

ಬೈಯಡ್ ನಡತಿ, ಮುಗಿತಲ ಕೂಟದ ಗುರ್ಕ್ಯಾರ್ಮೆನ್ ಮಣಿಪಾಲದ ಐ.ಸಿ.ಡಿ.ಎಸ್.ದ ಗುರ್ಕಾರ್ಲ್ ಕೆ. ಕೆ. ಪೈ ವಹಿಸ್‌ದಿತ್ತೆರ್. ಖ್ಯಾತ ಹರಿದಾಸೆರ್ ಶ್ರೀ ಭದ್ರಗಿರಿ ಅಚ್ಯುತ ದಾಸೆರ್ ಮುಗಿತಲದ ಭಾಷಣ ಮಲ್ತೆರ್. ಪ್ರೊ. ಕೆ. ಬಾಲಕೃಷ್ಣ ಗಟ್ಟಿ ಮಲ್ಲ ಬಿನ್ನೆರಾದಿತ್ತೆರ್. ಶ್ರೀಮತಿ ರತ್ನಾವತಿ ಬೈಕಾಡಿ, ನವೀನ್ ಕುಮಾರ್ ಜೈನ್, ಸುರೇಖ ಕವತ್ತಾರು, ಶ್ರೀ ಕೆ. ವಿ. ರಮಣ ಭಾವಗೀತೆ ಕೂಟ ನಡಪಾದ್ ಕೊರ್ಯೆರ್. ಅಯಿಡ್ದ್ ಬೊಕ್ಕ ಕುಡುಬಿ ನೃತ್ಯ ನಡತ್ತ್‌ಂಡ್. ಅಕೇರಿಗ್ ತುಳು ಸಾಹಿತ್ಯ ಅಕಾಡೆಮಿದ ರಿಜಿಸ್ಟ್ರಾರ್ ಡಾ. ಪಾಲ್ತಾಡಿ ರಾಮಕೃಷ್ಣ ಆಚಾರ್ ಸೊಲ್ಮೆ ಸಂದಾಯ ಮಲ್ತೆರ್.

ಅಕ್ಕಾಡೆಮಿಯ ಕಾರ್ಯಕ್ರಮಗಳು

ಕಲ್ಲಮುಂಡ್ಕೂರಿನಲ್ಲಿ 'ಊರ್ದ ಜಾತ್ರೆ'

16 ಎಪ್ರಿಲ್ 1997

ಕಲ್ಲಮುಂಡ್ಕೂರಿನಲ್ಲಿ ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ, ಶ್ರೀಕ್ಷೇತ್ರ ದೈಲಬೆಟ್ಟು ಹಾಗೂ ಕಲ್ಲಮುಂಡ್ಕೂರು ಶಿವಶಕ್ತಿ ತುಳುಕೂಟ ಇವುಗಳ ಸಂಯುಕ್ತ ಆಶ್ರಯದಲ್ಲಿ ಸಡಗರದಿಂದ ನಡೆದ 'ಊರ್ದ ಜಾತ್ರೆ' ಕಾರ್ಯಕ್ರಮವನ್ನು ಉದ್ಘಾಟಿಸುತ್ತ ಅಕಾಡೆಮಿಯಯ ಸದಸ್ಯ ಶ್ರೀ ಕೆ. ಗುಣಪಾಲ ಕಡಂಬ ಅವರು ಹಳ್ಳಿಗಳಲಲ್ಲಿ ಜರಗುವ ಜಾತ್ರೆಯ ಸಂದರ್ಭದಲ್ಲಿ ಯುವ ಸಂಘಟನೆ ಹೇಗೆ ಸತ್ಕಾರ್ಯ ಕೈಗೊಳ್ಳಬೇಕೆಂದು ವಿವರಿಸಿದರು.

ಅಧ್ಯಕ್ಷತೆ ವಹಿಸಿದ್ದ ಅಕಾಡೆಮಿ ರಿಜಿಸ್ಟ್ರಾರ್ ಡಾ. ಪಾಲ್ತಾಡಿ ರಾಮಕೃಷ್ಣ ಆಚಾರ್ ತುಳು ಭಾಷೆ, ಸಂಸ್ಕೃತಿ ಹಾಗೂ ತುಳುನಾಡಿನ ಕಲೆಗಳ ವೈಶಿಷ್ಟ್ಯ ತಿಳಿಸಿದರು. ಮುಖ್ಯ ಅತಿಥಿ ಡಾ. ವಾಮನ ನಂದಾವರ ತುಳುನಾಡಿನ ಜಾತ್ರೆಗಳ ಮಹತ್ವವನ್ನು ವರ್ಣಿಸಿದರು. ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ಪ್ರಧಾನ ಅರ್ಚಕ ವೇ। ಮೂ। ಶ್ರೀಧರ ಭಟ್ಟರು ಆಶೀರ್ವಚನಗೈದರು.

ಈ ಸಂದರ್ಭದಲ್ಲಿ 77 ವರ್ಷಗಳಿಂದ ನಿರಂತರ ಭೂತ ನರ್ತನಗೈದ, ಪಾಡ್ದನ ಪ್ರವೀಣನೆಂದು ಖ್ಯಾತಿ ಪಡೆದ ಶ್ರೀ ಅಂತು ನಲಿಕೆಗಾರ ಅವರನ್ನು ಸನ್ಮಾನಿಸಲಾಯಿತು.

ದೈಲಬೆಟ್ಟು ದೇವಳದ ಧರ್ಮದರ್ಶಿ ಶ್ರೀ ಸುಭಾಶ್ಚಂದ್ರ ಪಡಿವಾಳ್ ಸ್ವಾಗತಿಸಿದರು. ಶಿವಶಕ್ತಿ ತುಳುಕೂಟದ ಅಧ್ಯಕ್ಷ ಶ್ರೀ ನಾರಾಯಣ ಕಲ್ಲಮುಂಡ್ಕೂರು ಕಾರ್ಯಕ್ರಮ ನಿರೂಪಿಸಿ ವಂದಿಸಿದರು.

ಕುಡ್ಲ ತುಳುಕೂಟದ 10ನೇ ಬಿಸು ಪರ್ಬ

14 ಎಪ್ರಿಲ್ 1997

ಪಗ್ಗು ತಿಂಗಳು ಪ್ರಾರಂಭವಾಗುವಲ್ಲಿಂದಲೇ ತುಳುವರ ಹೊಸ ಬದುಕಿನ ಹೊಸ ವರ್ಷದ ಆರಂಭ. ಇದನ್ನೇ ಬಿಸು ಹಬ್ಬವೆಂದು ಆಚರಿಸುತ್ತೇವೆ. ಪ್ರಾಚೀನ ಕಾಲದಿಂದ ಉಳಿದು ಬಂದಿರುವ ತುಳುವರ ಕೃಷಿ ಕಾರ್ಯ, ಸುಖ ಶಾಂತಿಯ ಶುಭ ಕಾಮನೆಗಳು ಈ ಮೂಲಕ ಉಳಿದು ಬರಲಿ ಎಂಬುದಾಗಿ ತುಳು ಸಾಹಿತ್ಯ ಅಕಾಡೆಮಿಯ ಅಧ್ಯಕ್ಷ ಪ್ರೊ. ಬಿ. ಎ. ವಿವೇಕ ರೈ ಅವರು ತುಳುಕೂಟದ ಹತ್ತನೆಯ ಬಿಸು ಹಬ್ಬದ ಮುಖ್ಯ ಅತಿಥಿ ಭಾಷಣದಲ್ಲಿ ಹೇಳಿದರು. ದ.ಕ. ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಶ್ರೀ ಹರಿಕೃಷ್ಣ ಪುನರೂರು ಬಿಸುಹಬ್ಬದ ತುಳುನಾಡಿನ ಸುಖದ ದಿನಗಳು ನಿರೀಕ್ಷೆ ಕಡಿಮೆಯಾಗುತ್ತಿರುವ ಇಂದು ಕಹಿಯಲ್ಲೂ ಸಿಹಿ ಸಿಗುವಂತಾಗಲಿ ಎಂದು ಹಾರೈಸಿದರು. ಅಖಿಲ ಭಾರತ ತುಳು ಒಕ್ಕೂಟದ ಅಧ್ಯಕ್ಷ ಶ್ರೀ ಅಡ್ಯಾರು ಮಹಾಬಲ ಶೆಟ್ಟಿ, ಜಿಲ್ಲಾ ಸಣ್ಣ ಕೈಗಾರಿಕಾ ಸಂಘದ ಅಧ್ಯಕ್ಷ ಶ್ರೀ ಯೋಗೀಶ್ ಕುಮಾರ್ ಜೆಪ್ಪು, ಸುರತ್ಕಲ್ ರತ್ನಾ ಬೋರ್‌ವೆಲ್‌ನ ಮಾಲಕ ಶ್ರೀ ಕೆ. ರಮಾನಂದ ರಾವ್ ಮುಖ್ಯ ಅತಿಥಿಗಳಾಗಿದ್ದರು.

1996ನೆಯ ಸಾಲಿನ ಶ್ರೀ ರತ್ನವರ್ಮ ಹೆಗ್ಗಡೆ ಬಹುಮಾನವನ್ನು ಶ್ರೀಮತಿ ಶಕುಂತಳಾ ಭಟ್ ಹಳೆಯಂಗಡಿ, ಶ್ರೀ ಕೆ. ಕೆ. ಗಟ್ಟಿ ಮತ್ತು ಎ. ದುರ್ಗಾಪ್ರಸಾದ್ ರೈ ಕುಂಬ್ರ ಇವರು ಪಡೆದರು. ತುಳು ಕೂಟದ ಅಧ್ಯಕ್ಷ ಶ್ರೀ ದಾಮೋದರ ನಿಸರ್ಗ ಪ್ರಾರಂಭದಲ್ಲಿ ಸ್ವಾಗತಿಸಿದರು. ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ಸದಸ್ಯೆ ಶ್ರೀಮತಿ ಕೆ.ಲೀಲಾವತಿ ಮತ್ತು ಎಂ. ರತ್ನಕುಮಾರ್ ಕಾರ್ಯಕ್ರಮ ನಿರ್ವಹಣೆ ಮಾಡಿದರು. ತುಳುಕೂಟದ ಕಾರ್ಯದರ್ಶಿ ಶ್ರೀ ಚಂದ್ರಶೇಖರ ಶೆಟ್ಟಿ ಸೊಲ್ಮೆ ಸಂದಾಯ ಮಾಡಿದರು. ಕು. ಸುಚೇತಾ ಬಳಗದವರಿಂದ ಗೀತಾ ನೃತ್ಯ, ಶ್ರೀ ತೋನ್ಸೆ ಪುಷ್ಕಳ ಕುಮಾರ್ ಬಳಗದವರಿಂದ ಜಾನಪದ ಸಂಗೀತ ಶ್ರೀ ಜೆ. ತಿಮ್ಮಪ್ಪ ಪೂಜಾರಿ ಮತ್ತು ಕೂಟ ದವರಿಂದ ಡೋಲು ಸಂಗೀತ ಹಾಗೆಯೇ ಶ್ರೀ ಭಾಸ್ಕರ ರೈ ಕುಕ್ಕುವಳ್ಳಿ, ಶ್ರೀ ಎಂ. ಪ್ರಭಾಕರ ಜೋಶಿ, ಮುಂಡಪ್ಪ ಬೋಳೂರು (ಅರ್ಥಗಾರಿಕೆ), ಶ್ರೀ ಯೋಗೀಶ್ ಕುಮಾರ್ ಜೆಪ್ಪು (ಭಾಗವತಿಕೆ) ಇವರಿಂದ ವಾಲಿ ಮೋಕ್ಷ ತಾಳಮದ್ದಳೆ ಕೂಟ ನಡೆಯಿತು.

ರಾಗತರಂಗ: ತುಳು ಭಾವಗಾನ ಶಿಬಿರ

17 ಎಪ್ರಿಲ್ 1997

'ಚಿಕ್ಕ ಮಕ್ಕಳಲ್ಲಿ ಹುದುಗಿರುವ ಪ್ರತಿಭೆಯನ್ನು ಹೊರಗೆಳೆಯಲು ಮುಕ್ತ ವಾತಾವರಣದಿಂದ ಮಾತ್ರ ಸಾಧ್ಯ. ಮಕ್ಕಳ ಜ್ಞಾನ ಇಂದು ಕೇವಲ ಪಠ್ಯ ಪುಸ್ತಕಗಳ ಚೌಕಟ್ಟಿಗೆ ಮಾತ್ರ ಸೀಮಿತವಾಗಿರುವುದು ದುರದೃಷ್ಟಕರ. ಮಗು ತನ್ನ ಸುತ್ತಮುತ್ತಲಿನ ಪರಿಸರದಿಂದ ನೇರವಾಗಿ ಕಲಿಯುವಂತಹ ವಿಷಯಗಳು ಅದೆಷ್ಟೋ ಇವೆ. ಆದರೆ ನಮ್ಮ ಮಕ್ಕಳು ಡಾಕ್ಟರ್, ಇಂಜಿನಿಯರ್ ಆಗಬೇಕು ಎಂಬ ಸ್ವಾರ್ಥಭಾವದಿಂದ ಅವರ ಸೃಜನಶೀಲತೆಯನ್ನು ಕೊಂದು ಹಾಕುತ್ತೇವೆ. ರಾಗ ತರಂಗದಂತಹ ಸಂಸ್ಥೆಗಳು ಮಕ್ಕಳ ಪ್ರತಿಭೆಯನ್ನು ಗುರುತಿಸಿ ಬೆಳೆಸಲು ಪ್ರೇರಣೆ ನೀಡುತ್ತಿರುವುದು ಈ ಮಕ್ಕಳ ಹಾಗೂ ಹೆತ್ತವರ ಭಾಗ್ಯ ಎಂಬುದು ಉತ್ಪ್ರೇಕ್ಷೆಯ ಮಾತಲ್ಲ' ಎಂದು ತುಳು ಸಾಹಿತ್ಯ ಅಕಾಡೆಮಿಯ ರಿಜಿಸ್ಟ್ರಾರ್ ಡಾ. ಪಾಲ್ತಾಡಿ ಹೇಳಿದರು.

ರಾಗ ತರಂಗ ಹಮ್ಮಿಕೊಂಡ 'ಬೇಸಿಗೆ ಶಿಬಿರ', 'ನಾಟಕ ತರಬೇತಿ ಶಿಬಿರ' ಹಾಗೂ ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿಯ ಸಹಯೋಗದೊಂದಿಗೆ ಸಂಯೋಜಿಸಿದ 'ತುಳು ಭಾವಗಾನ ಶಿಬಿರ'ಗಳನ್ನು ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು. ಶ್ರೀಮತಿ ಸುಲೋಚನಾ ಭಟ್ ಅಧ್ಯಕ್ಷತೆ ವಹಿಸಿದ್ದರು.

ಇನ್ನೋರ್ವ ಮುಖ್ಯ ಅತಿಥಿ ವಿ.ವಿ. ಕಾಲೇಜಿನ ಪ್ರಾಧ್ಯಾಪಕ ಡಾ. ಸತ್ಯನಾರಾಯಣ ಭಟ್, ಇಂತಹ ಶಿಬಿರಗಳು ಮಕ್ಕಳ ಪ್ರತಿಭೆಯನ್ನು ಪ್ರಕಾಶನಗೊಳಿಸುವುದಲ್ಲದೆ ಅವರ ವ್ಯಕ್ತಿತ್ವವನ್ನೂ ರೂಪಿಸುವುದು, ಕಲೆ ಮತ್ತು ಸಾಂಸ್ಕೃತಿಕ ಚಟುವಟಿಕೆಗಳು ನಮ್ಮ ಜೀವನವನ್ನು ಶ್ರೀಮಂತಗೊಳಿಸುವುವು ಎಂದು ಹೇಳಿದರು.

ಶ್ರೀಮತಿ ಚಂದ್ರಕಲಾ ನಂದಾವರ ಮುಖ್ಯ ಅತಿಥಿ ಸ್ಥಾನದಿಂದ ಮಾತನಾಡುತ್ತಾ 'ನಗರಗಳ ಸಂಕೀರ್ಣ ಬದುಕಿನಲ್ಲಿ ನಮ್ಮ ಎಳೆಯ ಜನಾಂಗ ತಮ್ಮನ್ನು ತಾವೇ ಕಳೆದುಕೊಳ್ಳುತ್ತಿದ್ದಾರೆ. ಮಾನವ ಸಹಜ ಜೀವನ ಮೌಲ್ಯಗಳು ಅವರಲ್ಲಿ ಮೊಳಕೆಯೊಡೆಯುತ್ತಿಲ್ಲ. ನಮ್ಮ ಶಿಕ್ಷಣ ಪದ್ಧತಿಯೂ ನಮ್ಮನ್ನು ಕೇವಲ ವೈಯಕ್ತಿಕ ಹಿತದೆಡೆಗೆ ಕೊಂಡೊಯ್ಯುತ್ತಿದೆ. ರ್‍ಯಾಂಕನ್ನೇ

ಗುರಿಯನ್ನಾಗಿರಿಸಿಕೊಂಡಿರುವ ವಿದ್ಯಾರ್ಥಿಗಳಿಗೆ, ಹೆತ್ತವರಿಗೆ ತಮ್ಮ ಮಕ್ಕಳ ಸಂತೃಪ್ತ ಹಾಗೂ ಪರಿಪೂರ್ಣ ಬದುಕು ಮುಖ್ಯವಾಗುವುದಿಲ್ಲ. ಅಂತಹುದರಲ್ಲಿ ವಿದ್ಯಾರ್ಥಿಗಳಿಗೆ ತಮ್ಮ ಅರಿವು ಮೂಡಿಸುವ ಇಂತಹ ಶಿಬಿರಗಳು ಆಶಾಭಾವನೆ ಹುಟ್ಟಿಸುತ್ತವೆ' ಎಂದರು. ರಾಗ ತರಂಗದ ಚಟುವಟಿಕೆಗಳನ್ನು ಅವರು ಕೊಂಡಾಡಿ ಶಿಬಿರಗಳಿಗೆ ಶುಭ ಹಾರೈಸಿದರು. ರಾಗ ತರಂಗದ ಉಪಾಧ್ಯಕ್ಷ ಸುರೇಶ್‌ರಾಜ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಕಾರ್ಯದರ್ಶಿ ಮ್ಯಾಕ್ಸಿಂ ರಾಡ್ರಿಗಸ್ ಸ್ವಾಗತಿಸಿ, ನಿಕಟಪೂರ್ವ ಅಧ್ಯಕ್ಷ ಎಂ. ಬಿ. ಪುರಾಣಿಕ್ ರಾಗ ತರಂಗದ ಧ್ಯೇಯೋದ್ದೇಶಗಳನ್ನು ವಿವರಿಸಿದರು. ಬೈಕಾಡಿ ಜನಾರ್ದನ ಆಚಾರ್ ಕಾರ್ಯಕ್ರಮ ನಿರ್ವಹಿಸಿದರು. ಚಂದ್ರಕಾಂತ್ ನಾಯಕ್ ವಂದಿಸಿದರು. ಈ ಮೂರೂ ಶಿಬಿರಗಳು ಡೊಂಗರಕೇರಿಯ ಕೆನರಾ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ನಡೆಯುತ್ತಿದ್ದು ಸಮಾರೋಪ ಸಮಾರಂಭ ಎಪ್ರಿಲ್ 20ರಂದು ಅಲ್ಲಿಯೇ ನಡೆಯಲಿದೆ.

ತುಳು ಸಂಸ್ಕೃತಿಯ ಜಾನಪದ ಆರಾಧನಾ ಪದ್ಧತಿಗಳು ಪರಿಜ್ಞಾನ ಶಿಬಿರ

27 ಎಪ್ರಿಲ್ 1997

"ನಾಳೆಯ ದಿನವನ್ನು ಎದುರಿಸುವ ನಂಬಿಕೆಗೆ ದೇವರು ಅನ್ನೋ ಅಗೋಚರ ಶಕ್ತಿಯ ಅವಶ್ಯಕತೆ ಬದುಕಿನಲ್ಲಿ ಅತ್ಯವಶ್ಯ. ಸಮಾಜದ ಆರೋಗ್ಯಕ್ಕೂ ಹಿತಕರ. ಈ ನಿಟ್ಟಿನಲ್ಲಿ ವಿಶಿಷ್ಟ ಸಂಸ್ಕೃತಿಯನ್ನು ಹೊಂದಿರುವ ಈ ತುಳುನಾಡಿನಲ್ಲಿ ಕಾರಣಿಕ ಪುರುಷುರಾದ ಕೋಟಿ ಚೆನ್ನಯರ ಬಗೆಗಿನ ಅಭಿಮಾನ ಅಭೂತಪೂರ್ವವಾದುದು. ಕೋಟಿ ಚೆನ್ನಯರ ಐತಿಹ್ಯದ ಮಹತ್ವವನ್ನು ಪರಿಣಾಮಕಾರಿಯಾಗಿ ಸಮಾಜದ ಮೇಲೆ ಪ್ರತಿಬಿಂಬಿಸುವಲ್ಲಿ, ಜನಜಾಗೃತಿಯನ್ನುಂಟು ಮಾಡುವಲ್ಲಿ ಇಲ್ಲಿನ ಆದಿ ಉಡುಪಿ ಬ್ರಹ್ಮಬೈದರ್ಕಳ ಸಾಂಸ್ಕೃತಿಕ ಪ್ರತಿಷ್ಠಾನವು ನಡೆಸುತ್ತಿರುವ ಪರಿಜ್ಞಾನ ಶಿಬಿರವು ಮಹತ್ವವಾದುದು. ಆಧುನಿಕತೆಯ ಕೊಚ್ಚೆಯಲ್ಲಿ ಮುಳುಗೇಳುತ್ತಾ ಅರಿತೋ ಅರಿಯದೆಯೋ ಸಮಾಜಘಾತಕ ಶಕ್ತಿಗಳಾಗಿ ಮಾರ್ಪಾಡುವ ಇಂದಿನ ತರುಣರನ್ನು ಸಮಾಜದ ಮುಖ್ಯವಾಹಿನಿಯಲ್ಲಿ ಸೇರಿಸುವಂತಹ ಕೆಲಸ ಇಂಥ ಶಿಬಿರಗಳಿಂದಾಗಲಿ" ಎಂದು ಶಾಸಕ ಶ್ರೀ ಯು. ಆರ್. ಸಭಾಪತಿಯವರು ಇಂದಿಲ್ಲಿ ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿಯ ಸಹಯೋಗದೊಂದಿಗೆ ಶ್ರೀ ಬ್ರಹ್ಮ ಬೈದರ್ಕಳ ಸಾಂಸ್ಕೃತಿಕ ಅಧ್ಯಯನ ಪ್ರತಿಷ್ಠಾನ ನಡೆಸಿದ ಪರಿಜ್ಞಾನ ಶಿಬಿರದ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸಿ ಹೇಳಿದರು.

ಈ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಡಾ. ವಾಮನ ನಂದಾವರ ಮಾತನಾಡುತ್ತಾ 'ಮಾನವೀಯ ಧರ್ಮಕ್ಕೆ ಅತಿ ಹತ್ತಿರದ್ದಾದ ಜನಪದ ಧರ್ಮದ ಸಂಸ್ಕೃತಿ ಉಳಿದು ಬೆಳೆದು ಬರಲಿ' ಎಂದರು.

ಎರಡು ದಿನಗಳ ಈ ಕಾರ್ಯಕ್ರಮವನ್ನು ಉದ್ಘಾಟಿಸಿದ ಶ್ರೀ ರಾಮಚಂದ್ರ ಕಿದಿಯೂರು ಅವರು "ಅನನ್ಯವಾಗಿ ಅವ್ಯಕ್ತ ಸತ್ಯದರ್ಶನ ಮಾಡಿಸುತ್ತಿರುವ ಬೈದೇರುಗಳ ಶಕ್ತಿಯು" ತುಳುನಾಡಿನ ಜನತೆಗೆ ಪ್ರೇರಣೆಯಾಗಲಿ" ಎಂದರು.

ಇನ್ನೋರ್ವ ಮುಖ್ಯ ಅತಿಥಿ ಶ್ರೀ ಕ್ಯಾಪ್ಟನ್ ಬಾಲಕೃಷ್ಣ ರೈಯವರು ಮಾತನಾಡುತ್ತಾ 'ನಮ್ಮೊಳಗಿರುವ ಅಂತರ್ಯಾದ ಶಕ್ತಿಯೇ ದೇವರು. ಆ ಶಕ್ತಿಯನ್ನು ಬಡಿದೆಬ್ಬಿಸಿ

ಸೋಮಾರಿತನವನ್ನು ಬಿಟ್ಟು ದುಡಿಯುವ ಕೈಗಳಿಗೆ ಎಚ್ಚರಿಕೆಯನ್ನು ನೀಡುವಂತಹ ಪಾಠವು ಈ ಶಿಬಿರವಲ್ಲಾಗಲಿ' ಎಂದು ಹಾರೈಸಿದರು.

ಈ ಎರಡು ದಿನಗಳ ಶಿಬಿರವನ್ನು ಶ್ರೀ ಮುದ್ದು ಮೂಡುಬೆಳ್ಳೆಯವರು ನಿರ್ದೇಶಿಸಿದ್ದು ಪ್ರತಿಷ್ಠಾನದ ಗೌ. ಅಧ್ಯಕ್ಷರಾದ ಶ್ರೀ ಯು. ನಾರಾಯಣ ಅವರು ಸ್ವಾಗತಿಸಿದರು. ಕಾರ್ಯದರ್ಶಿ ಶ್ರೀ ದಾಮೋದರ ಕಲ್ಮಾಡಿಯವರು ಪ್ರಾಸ್ತಾವಿಕ ಭಾಷಣ ಮಾಡಿದರು. ಜಾನಪದ ಸಾಹಿತಿ ಶ್ರೀ ಬನ್ನಂಜೆ ಬಾಬು ಅಮೀನ್ ಅವರು ಹದಿನೈದು ವರ್ಷದ ನಮ್ಮ ಸಾಧನೆಯಿಂದ ನಮ್ಮ ಪ್ರತಿಷ್ಠಾನಕ್ಕೆ ಸ್ವಂತ ನೆಲೆಯೊಂದನ್ನು ಆಂಶಿಕ ಮಟ್ಟದಲ್ಲಿ ಹೊಂದಿರುವುದಾದರೂ ಮುಂದಿನ ನಮ್ಮ ಎಲ್ಲ ಯೋಜನೆಗಳಿಗೆ ಸರಕಾರಿ ನೆರವನ್ನು ಅಪೇಕ್ಷಿಸುತ್ತಾ ನಮ್ಮ ಸ್ವಂತ ಸಾಧನೆಯಿಂದ ಯಶಸ್ವಿಯಾಗುವೆವು ಎಂಬ ಆಶಾಭಾವನೆಯನ್ನು ವ್ಯಕ್ತಪಡಿಸಿದರು.

ಶಿಬಿರದಲ್ಲಿ ಉಡುಪಿ ಆರ್.ಆರ್.ಸಿ. ಯ ಶ್ರೀ ಎ. ಕೃಷ್ಣಯ್ಯ ಅವರು 'ಕ್ಷೇತ್ರೀಯ ಆರಾಧನಾ ಪದ್ಧತಿಗಳು' ಈ ವಿಚಾರದಲ್ಲಿ ಹಾಗೂ ಪ್ರೊ. ಮೋಹನ್ ಕೋಟ್ಯಾನ್ ಅವರು 'ಜಾನಪದ ಆರಾಧನೆಯಲ್ಲಿ ಅಂತರ್ಗತವಾದ ಪ್ರೇರಣೆ' ಎಂಬ ವಿಷಯದ ಮೇಲೆ ಉಪನ್ಯಾಸವಿತ್ತರು.

ಉಡುಪಿಯ ಚಿತ್ರಕಲಾವಿದೆ ಶ್ರೀಮತಿ ಸುಲೋಚನಾ ವೇಣುಗೋಪಾಲ್ 'ಜನಪದ ಆರಾಧನೆಯಲ್ಲಿ ಚಿತ್ರಕಲೆಗಳ ಭಾವನಾತ್ಮಕ ನಿರೂಪಣೆ' ವಿಷಯದ ಮೇಲೆ ಉಪನ್ಯಾಸವಿತ್ತರು.

ಸುಮಾರು 50 ಜನ ಶಿಬಿರಾರ್ಥಿಗಳು ಶಿಬಿರದಲ್ಲಿ ಭಾಗವಹಿಸಿದ್ದರು. ಸಮಾರೋಪ ಸಮಾರಂಭದಲ್ಲಿ ಪ್ರೊ. ಅಮೃತ ಸೋಮೇಶ್ವರರಿಗೆ 'ಬೈದಶ್ರೀ' ಪ್ರಶಸ್ತಿ ಮಾಡಲಾಯಿತು.

ಕೋಟಿ ಚೆನ್ನಯ ಸುಗಿಪು-ಜಾನಪದ ಮೇಳ

ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ಮತ್ತು ಅಗೋಳಿ ಮಂಜಣ ಜಾನಪದ ಕೇಂದ್ರ ಪಾವಂಜೆ ಇವುಗಳ ಸಂಯುಕ್ತ ಆಶ್ರಯದಲ್ಲಿ ಪಾವಂಜೆಯ 'ಸಿರಿದೊಂಪ'ದಲ್ಲಿ 'ಕೋಟಿ ಚೆನ್ನಯ ಸುಗಿಪು' ಎಂಬ ಒಂದು ದಿನದ ವಿಶಿಷ್ಟ ರೀತಿಯ ಜಾನಪದ ಮೇಳವು ಈಚೆಗೆ ನಡೆಯಿತು. ತುಳುನಾಡಿನ ಜನರ ಬೇಸಾಯದ ಪ್ರಧಾನ ಅಂಗವಾಗಿದ್ದ 'ಮುಕ್ಕಾರು ದಂಬೆ'ಯನ್ನು ತೂಗುವುದರೊಂದಿಗೆ ತುಳು ಅಕಾಡೆಮಿಯ ಅಧ್ಯಕ್ಷ ಪ್ರೊ. ಬಿ. ಎ. ವಿವೇಕ ರೈ ಅವರು ಮೇಳವನ್ನು ಉದ್ಘಾಟಿಸಿದರು.

ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ 'ತುಳು ಕೂಟ ಕುಡ್ಲ' ಇದರ ಅಧ್ಯಕ್ಷ ಶ್ರೀ ದಾಮೋದರ ನಿಸರ್ಗ ಇವರು ವೇದಿಕೆಯಲ್ಲಿ ರಚಿಸಲ್ಪಟ್ಟ ತುಳುವರ ಬದುಕಿನ ಜೀವನಾಡಿಯಾಗಿದ್ದ ಕಣಜಕ್ಕೆ (ಸಿರಿತುಪ್ಪೆ) ಪೊಲಿ ಮದಿಪುವಿನೊಂದಿಗೆ ಸಿರಿ ಇಡುವ ಮೂಲಕ ಕಾರ್ಯಕ್ರಮ ಆರಂಭವಾಯಿತು.

ತುಳುನಾಡಿನ ಸಾಂಸ್ಕೃತಿಕ ಪುರುಷರಾದ ಅವಳಿ ವೀರರು ಕೋಟಿ ಚೆನ್ನಯರ ಸ್ಮರಣೆಯನ್ನು ಮಾಡುವ ಉದ್ದೇಶದಿಂದಲೂ ತುಳುವರ ಮಣ್ಣಿನ ಬದುಕಿನ ಶ್ರೀಮಂತಿಕೆಯನ್ನು ಪರಿಚಯಿಸುವ ದೃಷ್ಟಿಯಿಂದಲೂ ಹಮ್ಮಿಕೊಂಡಿರುವ ಈ ಜಾನಪದ ಮೇಳದಲ್ಲಿ ಕುಡ್ಲ ತುಳು ಕೂಟದವರು

ಪ್ರಕಟಿಸಿದ ಗಣೇಶ ಅಮೀನ್ ಸಂಕಮಾರ್ ಇವರು ಬರೆದ 'ಅಮರ್ ಬೀರೆರ್ ಕೋಟಿ ಚೆನ್ನಯೆರ್' ಎಂಬ ತುಳು ಕಾದಂಬರಿಯನ್ನು ಪ್ರೊ. ಬಿ. ಎ. ವಿವೇಕ ರೈಯವರು ಬಿಡುಗಡೆ ಮಾಡಿದರು.

ಜಾನಪದ ವಿದ್ವಾಂಸ ಪ್ರೊ. ಅಮೃತ್ ಸೋಮೇಶ್ವರ ಅವರು 'ಜಾನಪದ ಮಹಾಕಾವ್ಯೊಲೆಡ್ ಕೋಟಿ ಚೆನ್ನಯೆರ್' ಎಂಬ ವಿಷಯವಾಗಿ, ಡಾ. ವಾಮನ ನಂದಾವರರು 'ಜನಪದ ಬದ್‌ಕ್‌ಡ್ ಕೋಟಿ ಚೆನ್ನಯೆರ್' ಎಂಬ ವಿಷಯವಾಗಿ ಉಪನ್ಯಾಸ ನೀಡಿದರು.

ಪಾವಂಜೆಯ ನಂದಿನಿ ನದಿಯ ತಟದ ನಿಸರ್ಗ ರಮ್ಯದ ನಡುವೆ ವಿನೂತನ ಶೈಲಿಯ ಬಯಲು ವೇದಿಕೆಯಲ್ಲಿ ತುಳು ಬದುಕನ್ನು ನೆನಪಿಸುವ 'ಸಿರಿ ಸಿಂಗಾರ'ದೊಂದಿಗೆ ನಡೆದ ಈ ಜಾನಪದ ಮೇಳವು ಶ್ರೀಮತಿ ಗುರುವಮ್ಮ ಇವರ ಕೋಟಿ ಚೆನ್ನಯರ ಸಂದಿಯೊಂದಿಗೆ ಆರಂಭವಾಗಿ ವಿವಿಧ ಜಾನಪದ ಹಾಡುಗಳ ಸಂಯೋಜನೆಯೊಂದಿಗೆ ಸಾಂಸ್ಕೃತಿಕ ಮೆರುಗನ್ನು ಪಡೆಯಿತು.

ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ತುಳು ಅಕಾಡಮೆಯ ರಿಜಿಸ್ಟ್ರಾರ್ ಡಾ. ಪಾಲ್ತಾಡಿ ರಾಮಕೃಷ್ಣ ಆಚಾರ್, ಡಾ. ಸೀ. ಹೊಸಬೆಟ್ಟು, ಕಾಟಿಪಳ್ಳ ಬ್ರಹ್ಮಶ್ರೀ ನಾರಾಯಣಗುರು ಶಿಕ್ಷಣ ಟ್ರಸ್ಟ್‌ನ ಮೆನೇಜಿಂಗ್ ಟ್ರಸ್ಟಿ ಶ್ರೀ ಸಾದು ಪೂಜಾರಿ ಕುಳಾಯಿ, ಶ್ರೀ ಎಚ್. ನಾರಾಯಣ ಸನಿಲ್ ಹಳೆಯಂಗಡಿ, ಕಂಕನಾಡಿ ಗರೋಡಿಯ ಮೊಕ್ತೇಸರ ಶ್ರೀ ಚಿತ್ತರಂಜನ್, ನಾಟಕಕಾರ ಶ್ರೀ ಮನು ಇಡ್ಯ, ಶ್ರೀ ದಾಮೋದರ ಸುವರ್ಣ ಹಳೆಯಂಗಡಿ, ಶ್ರೀ ಎಸ್.ಟಿ. ಕರ್ಕೇರ, ಶಿವಗಿರಿ ಮಠದ ವಿಖ್ಯಾತಾನಂದ ಸ್ವಾಮೀಜಿ ಮುಂತಾದವರು ಭಾಗವಹಿಸಿದರು.

ಈ ಸಂದರ್ಭದಲ್ಲಿ ಮಣ್ಣಿನ ಬದುಕಿನಲ್ಲಿ ತಮ್ಮನ್ನು ತಾವು ಅರ್ಪಿಸಿಕೊಂಡ ಮಣ್ಣಿನ ಮಕ್ಕಳಾದ ಶ್ರೀಮತಿ ಗುರುವಮ್ಮ (ಪಾಡ್ದನ), ಶ್ರೀ ಹೊನ್ನಯ್ಯ ಮೂಲ್ಯ (ತುಳು ಬೇಲೆ), ಶ್ರೀ ಬಾಬು ದೇವಾಡಿಗ ಖಂಡಿಗೆ (ಜನಪದ ವಾದ್ಯ) ಮತ್ತು ಬೋಜ ಪೂಜಾರಿ (ತುಳು ಸಂಪ್ರದಾಯ) ಇವರನ್ನು ಸನ್ಮಾನಿಸಲಾಯಿತು. 'ಅಗೋಳಿ ಮಂಜಣ' ಜಾನಪದ ಕೇಂದ್ರದ ಮುಖ್ಯಸ್ಥ ಶ್ರೀ ಗಣೇಶ ಅಮೀನ್ ಸಂಕಮಾರ್ ಕಾರ್ಯಕ್ರಮ ಸಂಯೋಜಿಸಿದರು.

ದಲಿತ ಕಲಾಮೇಳ

13 ಮೇ 1997

ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿಯ ಸಭಾಂಗಣದಲ್ಲಿ ದಲಿತ ಕಲಾಮೇಳವು ಮಂಗಳೂರಿನ ಶಾಸಕ ಶ್ರೀ ಎನ್. ಯೋಗೀಶ್ ಭಟ್ ಅವರ ಅಧ್ಯಕ್ಷತೆಯಲ್ಲಿ ಜರಗಿತು.

ಕರ್ನಾಟಕ ತುಳು ಅಕಾಡೆಮಿಯು 1996-97ನೇ ವರ್ಷದಲ್ಲಿ ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವಿಶೇಷ ಘಟಕ ಯೋಜನೆಯಲ್ಲಿ ಪಡೆದ ಅನುದಾನದಲ್ಲಿ ಜಿಲ್ಲೆಯ ವಿವಿಧ ಕಡೆಗಳಲ್ಲಿ ನಡೆಸಿದ ಸಾಂಸ್ಕೃತಿಕ ಮೇಳ, ವಿಚಾರಗೋಷ್ಠಿ, ಕಮ್ಮಟಗಳಲ್ಲಿ ಪಾಲ್ಗೊಂಡ ಅಭ್ಯರ್ಥಿಗಳು ಈ ಸಮಾರಂಭದಲ್ಲಿ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಿಕೊಟ್ಟರು.

ಅಕಾಡೆಮಿಯ ಅಧ್ಯಕ್ಷ ಪ್ರೊ. ಬಿ.ಎ. ವಿವೇಕ ರೈ ಅವರು ವಿಶೇಷ ಘಟಕ ಯೋಜನೆಯಲ್ಲಿ ನಡೆಸಲಾದ ಕಾರ್ಯಕ್ರಮಗಳ ಬಗ್ಗೆ ಸಂಕ್ಷಿಪ್ತ ವಿವರಣೆ ನೀಡಿದರು.

ಅಧ್ಯಕ್ಷ ಶಾಸಕ ಶ್ರೀ ಎನ್. ಯೋಗೀಶ್ ಭಟ್ ಅವರು ಪರಿಶಿಷ್ಟ ಜಾತಿಯ ಕಲಾವಿದರಿಗೆ ಅಕಾಡೆಮಿಯ ವತಿಯಿಂದ ನೀಡಲಾದ ವಾದ್ಯ ಸಾಮಗ್ರಿಗಳನ್ನು ವಿತರಿಸಿ ಅಕಾಡೆಮಿಯು ತುಳು ಭಾಷೆ ಮತ್ತು ಸಂಸ್ಕೃತಿಯ ಪುನಶ್ಚೇತನಕ್ಕಾಗಿ ನಡೆಸುತ್ತಿರುವ ಕೆಲಸ ಕಾರ್ಯಗಳನ್ನು ಶ್ಲಾಘಿಸಿದರು. ಸಭೆಯ ನಂತರ 'ಸಲಿಕೆ' ಕಲಾವಿದರ ಬಳಗದವರಿಂದ ಕನ್ಯಾಪು, ಚೆನ್ನು ಕುಣಿತ, ಕೋಲಾಟ, ಕು. ಸುರೇಖಾ ಕವತ್ತಾರು ಮತ್ತು ದಾ.ನ.ಉಮ್ಮಣ್ಣ ಮತ್ತು ಬಳಗದವರಿಂದ ತುಳು ಭಾವಗೀತೆಗಳು, ಗೇರುಕಟ್ಟೆ ದುಗ್ಗಪ್ಪ ಮತ್ತು ಬಳಗದವರಿಂದ ವಾದ್ಯಮೇಳದಿಂದೊಡಗೂಡಿದ ಸಾಂಸ್ಕೃತಿಕ ವೈವಿಧ್ಯ ಕಾರ್ಯಕ್ರಮಗಳನ್ನು ಒಳಗೊಂಡ ಕಲಾಮೇಳ ನಡೆಯಿತು.

ಡಾ. ಪಾಲ್ತಾಡಿ ರಾಮಕೃಷ್ಣ ಆಚಾರ್ ವಂದನಾರ್ಪಣೆಗೈದರು. ಅಕಾಡೆಮಿಯ ಸದಸ್ಯ ಡಾ. ವಾಮನ ನಂದಾವರ ಮತ್ತು ಶ್ರೀಮತಿ ಕೆ. ಲೀಲಾವತಿಯವರು ಕಾರ್ಯಕ್ರಮ ನಿರೂಪಿಸಿದರು.

ತುಳುನಾಟಕ ರಚನೆಯ ಕಮ್ಮಟ

29 ಮೇ 97 ರಿಂದ 4 ಜೂನ್ 99 ರವರೆಗೆ

ಉದ್ಘಾಟನೆ:

ನಾಟಕ ಕೃತಿಗಳು ರಂಗದ ಮೇಲೆ ಪ್ರಯೋಗವಾಗಿ ಪ್ರೇಕ್ಷಕರ ಮೆಚ್ಚುಗೆಯನ್ನು ಗಳಿಸಿದಾಗ ಮಾತ್ರ ಜೀವ ತಳೆಯುತ್ತವೆ. ನಿರ್ದೇಶಕರು ಜೀವ ನೀಡಲು ಸಾಧ್ಯವಾಗುವಂಥ ಸಾಹಿತ್ಯದ ಸೃಷ್ಟಿ ನಾಟಕಕರ್ತೃಗಳಿಂದ ಆಗಬೇಕು ಎಂದು ಮುಂಬಯಿಯ ಸಿನಿಮಾ ಮತ್ತು ನಾಟಕ ನಿರ್ದೇಶಕ ಸದಾನಂದ ಸುವರ್ಣ ಅವರು ಹೇಳಿದರು.

ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿಯು ದ. ಕನ್ನಡ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಸಹಯೋಗದೊಡನೆ ಮುಲ್ಕಿಯಲ್ಲಿ ನಡೆದ ಏಳು ದಿನಗಳ ತುಳು ನಾಟಕ ರಚನಾ ಕಮ್ಮಟವನ್ನು ಉದ್ಘಾಟಿಸಿ ಮಾತನಾಡುತ್ತಿದ್ದ ಅವರು ತಾವು ಪ್ರದರ್ಶಿಸುವ ನಾಟಕಕ್ಕೆ ಬೇಕಾದ ಪ್ರೇಕ್ಷಕರನ್ನು ಸೃಷ್ಟಿಸುವ ಹೊಣೆಯೂ ಕೂಡ ನಿರ್ದೇಶಕರು ಮತ್ತು ಸಾಹಿತಿಗಳದ್ದಾಗಿದೆ ಎಂದು ಹೇಳಿದರು.

ಮುಖ್ಯ ಅತಿಥಿಯಾಗಿದ್ದ ಕನ್ನಡದ ಖ್ಯಾತ ಲೇಖಕಿ ವೈದೇಹಿ ಅವರು ಮಾತನಾಡಿ, ತುಳುನಾಡಿನವರಿಗೆ ತುಳು ಕನ್ನಡವೆರಡೂ ಒಂದು ದೇಹಕ್ಕೆ ಎರಡು ಕಣ್ಣುಗಳಿದ್ದಂತೆ ಎರಡು ಭಾಷೆಗಳಿಗೂ ಸಮಾನ ಪ್ರಾಧಾನ್ಯವನ್ನು ಅವರು ನೀಡುತ್ತಾ ಬಂದಿದ್ದಾರೆ ಎಂದರು. ನಾಟಕದಲ್ಲಿ ನಿರ್ದೇಶಕರು ಅಭಿನಯಕ್ಕೆ ನೀಡುವಷ್ಟು ಪ್ರಾಧಾನ್ಯವನ್ನು ಭಾಷೆಗೂ ನೀಡಬೇಕು. ಈ ನಿಟ್ಟಿನಲ್ಲಿ ನಾಟಕದ ಯಶಸ್ಸಿಗೆ ಸಾಹಿತ್ಯವೂ ಕೂಡಾ ಮುಖ್ಯವಾಗುತ್ತದೆ. ಉತ್ತಮ ಸಾಹಿತ್ಯದಿಂದ ಕೂಡಿದ ನಾಟಕ ನಿರ್ಮಾಣಕ್ಕೆ ಇಂಥ ಕಮ್ಮಟಗಳು ಅತ್ಯಂತ ಅವಶ್ಯಕ ಎಂದು ಅವರು ಅಭಿಪ್ರಾಯಪಟ್ಟರು.

ತುಳುನಾಡಿನವರಿಗೆ ತಮ್ಮ ಪ್ರಾದೇಶಿಕ ಭಾಷೆ ತುಳುವಿನ ಬಗ್ಗೆ ಇದ್ದಷ್ಟೆ ಗೌರವ ಕನ್ನಡದ ಮೇಲೂ ಇದೆ. ತುಳುವರು ಕನ್ನಡಕ್ಕೆ ನೀಡಿದ ಕೊಡುಗೆ ಅಲ್ಪವೇನೂ ಅಲ್ಲ ಎಂದು ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಶ್ರೀ ಹರಿಕೃಷ್ಣ ಪುನರೂರು ಅವರು

ಹೇಳಿ ಸಾಹಿತ್ಯದ ಕೆಲಸಕ್ಕೆ ಸಾರ್ವಜನಿಕರ ಸಹಕಾರ, ಸಹಾನುಭೂತಿಯನ್ನು ಕೋರಿದರು. ಕಮ್ಮಟದ ನಿರ್ದೇಶಕ ಪ್ರೊ. ರಾಮದಾಸ್ ಅವರು ಕಮ್ಮಟದ ರೂಪುರೇಖೆಗಳನ್ನು ವಿವರಿಸಿ ತುಳುನಾಟಕ ರಚನಾಕಾರರಿಗೆ ತಮ್ಮ ಸೀಮಿತ ಗಡಿಯನ್ನು ದಾಟಿ ವಿಸ್ತೃತ ನಾಟಕ ಲೋಕವನ್ನು ಸಂಕ್ಷಿಪವಾಗಿ ಪರಿಚಯಿಸುವುದೇ ಈ ಕಮ್ಮಟದ ಉದ್ದೇಶವೆಂದು ಹೇಳಿದರು. ತುಳು ಸಾಹಿತ್ಯ ಅಕಾಡೆಮಿಯ ಅಧ್ಯಕ್ಷ ಪ್ರೊ. ಬಿ. ಎ. ವಿವೇಕ ರೈ ಅವರು ಅಕಾಡೆಮಿಯ ಕಾರ್ಯಕಲಾಪಗಳ ಬಗ್ಗೆ ವಿವರಣೆ ನೀಡಿ ಸ್ವಾಗತಿಸಿದರು. ಅಕಾಡೆಮಿಯ ರಿಜಿಸ್ಟ್ರಾರ್ ಡಾ. ಪಾಲ್ತಾಡಿ ರಾಮಕೃಷ್ಣ ಆಚಾರ್ ವಂದಿಸಿದರು. ಕಮ್ಮಟದ ಸಹನಿರ್ದೇಶಕರಾದ ಐ. ಕೆ. ಬೊಳುವಾರು ಮತ್ತು ಪಿ. ಕೃಷ್ಣಮೂರ್ತಿ ಅವರು ಕಾರ್ಯಕ್ರಮ ನಿರ್ವಹಣೆ ಮಾಡಿದರು.

ಸಮಾರೋಪ:

ತುಳು ನಾಟಕಗಳು ಭಾಷೆ ಮತ್ತು ಸಂಸ್ಕೃತಿಯ ಬೆಳವಣಿಗೆಗೆ ಬಹಳಷ್ಟು ಕೊಡುಗೆಯನ್ನು ನೀಡಿದೆ ಎಂದು ಖ್ಯಾತ ತುಳು ನಾಟಕಕಾರ ಎಂ. ಕೆ. ಸೀತಾರಾಮ ಕುಲಾಲ್ ಅಭಿಪ್ರಾಯಪಟ್ಟರು. ಅವರು ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿಯು ದ. ಕ. ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಸಹಯೋಗದೊಂದಿಗೆ ಮೂಲ್ಕಿಯಲ್ಲಿ ಹಮ್ಮಿಕೊಂಡ 7 ದಿನಗಳ ತುಳು ನಾಟಕ ರಚನಾ ಕಮ್ಮಟದ ಸಮಾರೋಪ ಭಾಷಣ ಮಾಡುತ್ತಾ ಇತ್ತೀಚಿನ ದಿನಗಳಲ್ಲಿ ಕೆಲವು ನಾಟಕಗಳಲ್ಲಿ ಕೇವಲ ಮನೋರಂಜನೆಯೇ ಮುಖ್ಯ ವಸ್ತುವಾಗಿರುವುದಕ್ಕೆ ವಿಷಾದ ವ್ಯಕ್ತಪಡಿಸಿದರು.

ನಾಟಕ ರಚನಾಕಾರರು ಉತ್ತಮ ವಸ್ತುಗಳನ್ನು ಆಯ್ದು ಸಾಹಿತ್ಯಕ್ಕೆ ಹೆಚ್ಚು ಪ್ರಾಧಾನ್ಯ ನೀಡಬೇಕು. ಅಕಾಡೆಮಿಯು ಈ ನಿಟ್ಟಿನಲ್ಲಿ ಹಮ್ಮಿಕೊಂಡಿರುವ ಈ ಕಮ್ಮಟವು ಅತ್ಯಂತ ಪ್ರಾಮುಖ್ಯವನ್ನು ಪಡೆದಿದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ತುಳು ಅಕಾಡೆಮಿಯ ಅಧ್ಯಕ್ಷ ಪ್ರೊ. ಬಿ. ಎ. ವಿವೇಕ ರೈ, ಅಕಾಡೆಮಿಯು ನಡೆಸಿದ ಹಲವು ಕಮ್ಮಟಗಳಲ್ಲಿ ತುಳು ನಾಟಕ ಕಮ್ಮಟವು ತನ್ನದೇ ಅನನ್ಯತೆಯನ್ನು ಹೊಂದಿದೆ ಎಂದು ತಿಳಿಸಿದರು. ಅವರು ಈ ಸಂದರ್ಭದಲ್ಲಿ ಶಿಬಿರಾರ್ಥಿಗಳಿಗೆ ಪ್ರಮಾಣಪತ್ರವನ್ನು ವಿತರಿಸಿದರು. ದ.ಕ. ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಹರಿಕೃಷ್ಣ ಪುನರೂರು ಹಾಗೂ ಕಮ್ಮಟದ ನಿರ್ದೇಶಕ ಪ್ರೊ. ರಾಮದಾಸ್ ಉಪಸ್ಥಿತರಿದ್ದರು.

ಕಮ್ಮಟದಲ್ಲಿ ಸಂಸ್ಕೃತಿ ನಾಟಕಗಳ ಬಗ್ಗೆ ಪ್ರೊ. ಎಂ. ರಾಜಗೋಪಾಲ ಆಚಾರ್ಯ, ಗ್ರೀಕ್ ನಾಟಕಗಳ ಬಗ್ಗೆ ಪ್ರೊ. ಸಿ. ಎನ್. ರಾಮಚಂದ್ರನ್, ಶೇಕ್ಸ್‌ಪಿಯರ್‌ನ ನಾಟಕಗಳ ಬಗ್ಗೆ ಪ್ರೊ. ಬಿ. ಆರ್. ನಾಗೇಶ್, ಗಿರೀಶ್ ಕಾರ್ನಾಡರ ನಾಟಕಗಳ ಡಾ. ನಾ. ದಾಮೋದರ ಶೆಟ್ಟಿ ಉಪನ್ಯಾಸ ನೀಡಿದರು.

ತುಳು ನಾಟಗಳ ಬಗ್ಗೆ ಮಚ್ಚೇಂದ್ರನಾಥ ಪಾಂಡೇಶ್ವರ, ಡಾ. ಕೆ. ಚಿನ್ನಪ್ಪಗೌಡ, ಮನು ಇಡ್ಯ, ಕುದ್ಕಾಡಿ ವಿಶ್ವನಾಥ ರೈ, ಪ್ರೊ. ಅಮೃತ ಸೋಮೇಶ್ವರ ಮೊದಲಾದವರು ತಮ್ಮ ಅನುಭವಗಳನ್ನು ಅಭ್ಯರ್ಥಿಗಳೊಂದಿಗೆ ಹಂಚಿಕೊಂಡರು. ಅಭ್ಯರ್ಥಿಗಳಾದ ಪ್ರಕಾಶ್ ಸುವರ್ಣ ಮತ್ತು ಕು. ಯಶೋಧ ತಮ್ಮ ಅನಿಸಿಕೆಗಳನ್ನು ತಿಳಿಸಿದರು.

ಅಕಾಡೆಮಿ ರಿಜಿಸ್ಟ್ರಾರ್ ಡಾ. ಪಾಲ್ತಾಡಿ ರಾಮಕೃಷ್ಣ ಆಚಾರ್ ಸ್ವಾಗತಿಸಿದರು. ಐ. ಕೆ. ಬೊಳುವಾರು ವಂದಿಸಿದರು. ಪಿ. ಕೃಷ್ಣಮೂರ್ತಿ ಕಾರ್ಯಕ್ರಮ ನಿರ್ವಹಿಸಿದರು.

'ಇಲ್ಲ್ ಇಲ್ಲ್‌ಡೆ ತುಳುವಪ್ಪೆ ಸಮಾಲೋಚನ ಸಭೆ

15 ಜೂನ್ 1997

ಮನೆಮನೆಗೆ ತುಳುಸಾಹಿತ್ಯ ಯೋಜನೆಯನ್ನು ಕಾರ್ಯರೂಪಕ್ಕೆ ತರಲು ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿಯ ಚಾವಡಿಯಲ್ಲಿ ಒಂದು ಸಮಾಲೋಚನೆ ಸಭೆ ನಡೆಯಿತು. ಅಕಾಡೆಮಿಯ ಅಧ್ಯಕ್ಷ ಪ್ರೊ. ಬಿ. ಎ. ವಿವೇಕ ರೈ ಅವರು ಈ ಸಭೆಯ ಅಧ್ಯಕ್ಷತೆ ವಹಿಸಿದ್ದರು. ತುಳು ಪುಸ್ತಕಗಳನ್ನು ಓದುವ ಅಭಿರುಚಿಯನ್ನು ಜನರಲ್ಲಿ ಹೆಚ್ಚಿಸುವ, ಪ್ರಕಟವಾದ ಪುಸ್ತಕಗಳ ಬಗ್ಗೆ ಜನರಲ್ಲಿ ಅಭಿರುಚಿ ಹುಟ್ಟಿಸುವ, ಕಾವ್ಯವಾಚನ, ಗದ್ಯವಾಚನಗಳ ಮೂಲಕ ತುಳುಗ್ರಂಥಗಳನ್ನು ಓದುವಂತೆ ಪ್ರೇರಣೆ ನೀಡುವ ತುಳು ಪುಸ್ತಕಗಳನ್ನು ಪ್ರಕಾಶನಗೊಳಿಸಿದವರಿಗೆ ಪುಸ್ತಕಗಳನ್ನು ಮಾರಾಟ ಮಾಡಿಸಿ ಬೆಂಬಲ ನೀಡುವ, ಈ ಯೋಜನೆಯ ಉದ್ದೇಶಗಳನ್ನು ಅವರು ಪ್ರಸ್ತುತಪಡಿಸಿದರು. ಈ ಯೋಜನೆ ವರ್ಷವಿಡೀ ತುಳುನಾಡಿನ ಬೇರೆಬೇರೆ ಸ್ಥಳಗಳಲ್ಲಿ ನಡೆಯಲಿದೆ. ಅಕಾಡೆಮಿ ಈ ಯೋಜನೆಗೆ ಚಾಲನೆ ಕೊಡುವ ಕೆಲಸ ಮಾಡುವುದು. ಲೇಖಕರು, ಪ್ರಕಾಶಕರು, ತುಳುಸಂಘ ಸಂಸ್ಥೆಗಳು, ಅಭಿಮಾನಿಗಳು ಕಾರ್ಯಭಾರ ವಹಿಸಿಕೊಂಡು ಮುಂದಿನ ಕೆಲಸ ನಡೆಸಿಕೊಡಬೇಕು ಎಂದು ಕೇಳಿಕೊಂಡರು.

'ಇಲ್ಲ್ ಇಲ್ಲ್ ತುಳುವಪ್ಪೆ' ಯೋಜನೆಯ ರೂಪರೇಖೆಯನ್ನು ಸಂಚಾಲಕ ಡಾ. ವಾಮನ ನಂದಾವರ ವಿವರಿಸಿ ಜಾಥಾದ ದಾರಿಯ ವಿವರಣೆ ನೀಡಿದರು. ಈ ಜಾಥಾದ ಉದ್ಘಾಟನೆ ಮಂಗಳೂರಿನಲ್ಲೆ ನಡೆದು ತುಳು ಗ್ರಂಥಗಳನ್ನು ಕೊಂಡೊಯ್ಯುವ ವಾಹನ ತುಳುತೇರು ಅಕಾಡೆಮಿಯಿಂದ ಹೊರಡುತ್ತದೆ. ತುಳುಭಾಷೆಯಲ್ಲಿ ಬರೆದ ಪುಸ್ತಕಗಳು, ತುಳು ಭಾಷೆ, ಸಂಸ್ಕೃತಿಯ ಬಗ್ಗೆ ಬೇರೆ ಬೇರೆ ಭಾಷೆಯಲ್ಲಿ ಬರೆದ ಗ್ರಂಥಗಳನ್ನು ಈ ಯೋಜನೆಯಲ್ಲಿ ಮಾರಾಟ ಮಾಡಬಹುದು. ಈ ಯೋಜನೆಯಲ್ಲಿ ಮಾರಾಟಮಾಡಲು ಪುಸ್ತಕಗಳನ್ನು ಅಕಾಡೆಮಿಗೆ ತಲುಪಿಸುವ ಮತ್ತು ಉಳಿದ ಪುಸ್ತಕಗಳನ್ನು ಹಿಂದಕ್ಕೆ ಒಯ್ಯುವ ಕೆಲಸ ಅವರವರಿಂದಲೇ ಆಗಬೇಕು. ಈ ಯೋಜನೆಗೆ ಕೆಲವು ಸ್ಥಳೀಯ ಸಂಘ ಸಂಸ್ಥೆಗಳ ಬೆಂಬಲ ಪಡೆಯಬೇಕು. ಪ್ರಾಥಮಿಕ ಪ್ರೌಢ ಶಾಲೆಗಳ ಶಿಕ್ಷಕರು, ಕಾಲೇಜಿನ ಉಪನ್ಯಾಸಕರು ಮತ್ತು ಎನ್.ಎಸ್.ಎಸ್. ಯೋಜನೆಯ ಮಕ್ಕಳು, ಮಹಾನಗರ ಪಾಲಿಕೆಯೊಳಗಿನ ಪ್ರದೇಶದ ಕಾರ್ಪೊರೇಟರುಗಳು, ಹಳ್ಳಿಯ ಮಂಡಲ ಪಂಚಾಯಿತು ಅಧ್ಯಕ್ಷರುಗಳು, ಸದಸ್ಯರುಗಳು, ತಾಲೂಕು ಪಂಚಾಯಿತು ಸದಸ್ಯರು, ಯುವಕ ಮಂಡಲ, ಯುವತಿ ಮಂಡಲ, ಮಹಿಳಾ ಮಂಡಲ ಸದಸ್ಯರುಗಳು, ಹಬ್ಬ, ಉತ್ಸವ, ಆಯನ, ನೇಮ, ಕೋಲ, ಕಂಬಳ ಮೊದಲಾದ ಕಡೆಗಳಲ್ಲಿ ಸೇರುವ ಜನರು ಈ ಯೋಜನೆಗೆ ಬೆಂಬಲ ನೀಡುವಂತೆ ಕಾರ್ಯಕ್ರಮ ಯೋಜಿಸಬೇಕು.

ಒಳಸರಿ ನಡೆಸುವ ಪೂರ್ವ ತಯಾರಿ: ಪ್ರಾರಂಭದಲ್ಲಿ ಸ್ಥಳೀಯ ಮುಖಂಡರನ್ನು ಭೇಟಿಯಾಗಿ ಅವರ ನೆರವು ಪಡೆಯಬೇಕು. ಹಳ್ಳಿಹಳ್ಳಿಗಳಿಗೆ ಹೋಗುವಾದ ಮೊದಲೇ ಅಲ್ಲಿಯ ಜನರಿಗೆ ಒಳಸರಿಯ ಸ್ಪಷ್ಟ ಕಲ್ಪನೆ ಕೊಡಬೇಕು. ಒಳಸರಿ ಹೋಗುವ ಮೊದಲು, ಹೋಗುವ ಸಂದರ್ಭ ಮಾರಾಟ ಆಗಬೇಕಾದ ಪುಸ್ತಕಗಳ ಪಟ್ಟಿ, ಬೆಲೆ ಇತ್ಯಾದಿ ವಿವರಗಳನ್ನು ಕರಪತ್ರ, ಬ್ಯಾನರ್, ಭಿತ್ತಿಚಿತ್ರಗಳ ಮೂಲಕ ತಿಳಿಯಪಡಿಸಬೇಕು. ಪತ್ರಿಕೆ, ಆಕಾಶವಾಣಿ ಮಾಧ್ಯಮಗಳ ಮೂಲಕ ಪ್ರಕಟಣೆ ಕೊಡಿಸಬೇಕು. ಬ್ಯಾನರುಗಳಲ್ಲಿ ಪುಸ್ತಕಗಳ ಹೆಸರು, ಅಥವಾ ಮುಖಚಿತ್ರಗಳನ್ನು ಬರೆಸಿ

ಪ್ರಚಾರ ಮಾಡಿಸಬೇಕು. ಅಲ್ಲದೆ ಮೊದಲು ಕರಪತ್ರಗಳಲ್ಲಿ ಪುಸ್ತಕಗಳ ಹೆಸರು, ಅಥವಾ ಮುಖಚಿತ್ರಗಳನ್ನು ಬರೆಸಿ ಪ್ರಚಾರ ಮಾಡಿಸಬೇಕು. ಅಲ್ಲದೆ ಮೊದಲು ಕರಪತ್ರಗಳವಲ್ಲಿ ಪುಸ್ತಕಗಳ ಹೆಸರು, ಬೆಲೆ ಇತ್ಯಾದಿ ವಿವರವಿರುವ ಮಾಹಿತಿಪತ್ರಗಳನ್ನು ವಿತರಿಸಬಹುದು. ಪ್ರತಿಯೋರ್ವ ತುಳುವನೂ ತಿಂಗಳಲ್ಲಿ ಅಥವಾ ಎರಡು ತಿಂಗಳಿಗೊಮ್ಮೆಯಾದರೂ ಅವರ ವರಮಾನದ ಶೇಕಡ 5ನ್ನು ಪುಸ್ತಕಗಳನ್ನೂ ಕೊಂಡುಕೊಳ್ಳಲು ತೆಗೆದಿಟ್ಟು ಪುಸ್ತಕಗಳನ್ನು ಕೊಂಡುಕೊಳ್ಳುವ ಮನಸ್ಸು ಮಾಡುವಂತೆ ತಿಳುವಳಿಕೆ ಹುಟ್ಟಿಸಬೇಕು. ಆಟ, ನಾಟಕಗಳ ಮೇಳ, ತಂಡಗಳು ಹಳ್ಳಿ ಹಳ್ಳಿಗಳಲ್ಲಿ ಪ್ರದರ್ಶನ ನೀಡುವ ಸಂದರ್ಭ ಅವದ ಮೂಲಕ ಒಳಸರಿಯ ಪ್ರಚಾರ ಕೊಡಿಸಬಹುದು. ಪುಸ್ತಕ ಒಯ್ಯಲು ಉಚಿತ ವ್ಯಾನ್, ಧ್ವನಿವರ್ಧಕ, ಬ್ಯಾಟರಿ, ಇತ್ಯಾದಿ ಉಚಿತ ನೀಡುವಂತೆ ಪ್ರೇರಣೆ ನೀಡಬೇಕು. ಪುಸ್ತಕ ಮಾರಾಟಕ್ಕಿಂತ ಮೊದಲು ಜನ ಸೇರುವಂತೆ ಕಾವ್ಯವಾಚನ, ಬೀದಿನಾಟಕ, ಕುಣಿತ, ತುಳು ಭಾವಗೀತೆ, ಭಾಷಣ ಇತ್ಯಾದಿ ಸಾಂಸ್ಕೃತಿಕ ಕಾರ್ಯಕ್ರಮ ನಡೆಸಬೇಕು.

ಪುಸ್ತಕಗಳನ್ನು ಹೇಗೆ ಸಂಗ್ರಹಿಸುವುದು?

ಲೇಖಕರು, ಪ್ರಕಾಶಕರುಗಳಿಗೆ ತಿಳುವಳಿಕೆ ಪತ್ರ ಕಳಿಸಿಕೊಡುವುದು. ಪ್ರತಿಯೊಬ್ಬ ಲೇಖಕ, ಪ್ರಕಾಶಕ ಪ್ರತಿ ಪುಸ್ತಕದ 50 ಪ್ರತಿಗಳನ್ನು ಅವರವರ ಖರ್ಚಿನಲ್ಲಿ ಅಕಾಡೆಮಿ ಕಾರ್ಯಾಲಯಕ್ಕೆ ತಲುಪಿಸಬೇಕು. ಒಳಸರಿಯ ವ್ಯವಸ್ಥೆಗಾಗಿ ಮಾರಾಟವಾದ ಪ್ರತಿ ಪುಸ್ತಕದಲ್ಲೂ ಶೇಕಡ 10 ಅಕಾಡೆಮಿಗೂ, ಶೇಕಡ 10ಪುಸ್ತಕ ಕೊಂಡುಕೊಳ್ಳುವವರಿಗೂ ಬಿಟ್ಟು ಕೊಡಬೇಕು. ಈ ಪುಸ್ತಕಗಳ ಲೆಕ್ಕಾಚಾರವನ್ನು ಸಂಚಾಲಕರು ಇರಿಸಿಕೊಂಡು ವಿಲೇವರಿಯ ವ್ಯವಸ್ಥೆ ನೋಡಿಕೊಳ್ಳಬೇಕು. ಈ ಸಂಬಂಧವಾಗಿ ಪತ್ರಿಕೆಗಳಲ್ಲಿ ಪ್ರಕಟಣೆ ನೀಡಬೇಕು.

ಸಂಚಾಲನಾ ಸಮಿತಿ ರಚನೆ. ಸಮಾಲೋಚನ ಸಭೆಯಲ್ಲಿ ಪಾಲುಗೊಂಡು ಸಲಹೆ ಸೂಚನೆ ಕೊಟ್ಟವರೆಲ್ಲ ಇದರ ಸದಸ್ಯರು. ಆದರೆ ಇದಕ್ಕೆ ಇನ್ನಷ್ಟು ಸದಸ್ಯರನ್ನು ಆಯಾ ಊರುಗಳಿಂದ ಲೇಖಕರು, ಪ್ರಕಾಶಕರು, ಯುವಕರನ್ನು, ತುಳು ಕೂಟದ ಸಂಘ ಸಂಸ್ಥೆಗಳ ಅಧ್ಯಕ್ಷರು, ಕಾರ್ಯದರ್ಶಿಗಳನ್ನು, ನಗರ ಸಭೆ, ಜಿಲ್ಲಾ ತಾಲೂಕು ಪಂಚಾಯತು ಅಧ್ಯಕ್ಷರನ್ನು ಕಾರ್ಪೊರೇಟರ್‌ಗಳನ್ನು, ಶಾಸಕರುಗಳನ್ನು, ಅಕಾಡೆಮಿಯ ಸರ್ವಸದಸ್ಯರುಗಳನ್ನು ಸೇರಿಸಿಕೊಳ್ಳಬಹುದು. ಸಂಚಾಲನ ಸಮಿತಿಯ ಗೌರವಾಧ್ಯಕ್ಷರನ್ನಾಗಿ **ಪ್ರೊ. ಬಿ. ಎ. ವಿವೇಕ ರೈ**, ಕಾರ್ಯಾಧ್ಯಕ್ಷರನ್ನಾಗಿ **ಶ್ರೀ ದಾಮೋದರ ನಿಸರ್ಗ**ರನ್ನೂ ಆಯ್ಕೆ ಮಾಡಲಾಯಿತು. ಹಾಗೆಯೇ ಪ್ರತಿಯೊಂದು ಊರಲ್ಲೂ ಒಂದೊಂದು ಸ್ಥಳೀಯ ಸಮಿತಿ ಬೇಕಾಗುವುದರಿಂದ ಈ ಕೆಳಗಿನಂತೆ ಸ್ಥಳೀಯ ಸಮಿತಿ ಸಂಚಾಲಕರನ್ನು ಆಯ್ಕೆಗೊಳಿಸಲಾಯಿತು.

ತಾಲೂಕು ಸಂಚಾಲಕರು

ಮಂಗಳೂರು-**ಶ್ರೀ ದಾಮೋದರ ನಿಸರ್ಗ**, ಉಡುಪಿ - **ಪ್ರೊ. ಹೆರಂಜೆ ಕೃಷ್ಣಭಟ್**, ಪುತ್ತೂರು-**ಶ್ರೀ ವಿಠಲ ಕಬಕ**, ಬಂಟ್ವಾಳ - **ಶ್ರೀ ತುಕಾರಾಮ್ ಪೂಜಾರಿ**, ಸುಳ್ಯ - **ಡಾ. ಪ್ರಭಾಕರ ಶಿಶಿಲ**, ಬೆಳ್ತಂಗಡಿ - **ಶ್ರೀ ರಘುನಾಥ ರೈ**, ಕಾರ್ಕಳ - **ಶ್ರೀ ಎಂ. ಕೆ. ವಿಜಯಕುಮಾರ್**, ಮೂಡಬಿದರೆ-ಚಂದ್ರಹಾಸ ದೇವಾಡಿಗ, ಕುಂದಾಪುರ - **ಶ್ರೀ ಕನರಾಡಿ ವಾದಿರಾಜ ಭಟ್**, ಕಾಸರಗೋಡು - **ಶ್ರೀ ಅಡೂರು ಉಮೇಶ್ ನಾಯಕ್**.

ತಾಲೂಕಿನ ಒಳಗಿನ ಕೆಲವು ಪ್ರಮುಖ ಸ್ಥಳಗಳಲ್ಲಿ ಕೆಲವರು ಸಹ ಸಂಚಾಲಕರನ್ನೂ ಆಯ್ಕೆಗೊಳಿಸಲಾಯಿತು.

ವಿಟ್ಲ- **ಶ್ರೀ ಕೆಲಿಂಜ ಸೀತಾರಾಮ ಆಳ್ವ**, ಬಿ.ಸಿ. ರೋಡು - **ಶ್ರೀ ಏರ್ಯ ಲಕ್ಷ್ಮೀನಾರಾಯಣ ಆಳ್ವ**, ಸುರತ್ಕಲ್ **ಶ್ರೀ ಭಾಸ್ಕರ ಕುಲಾಲ್**, ಮೂಲ್ಕಿ - **ಶ್ರೀ ಎಸ್. ಆರ್. ಅರುಣಕುಮಾರ್**, ಧರ್ಮಸ್ಥಳ - **ಶ್ರೀಮತಿ ಶಾರದಾ ಆರ್. ರಾವ್**, ಉಜಿರೆ - **ಶ್ರೀ ನಾವುಜಿರೆ**, ಕಡಬ-**ಶ್ರೀ ಕೆ. ಅನಂತರಾಮ ರಾವ್**, ಉಪ್ಪಿನಂಗಡಿ - **ಶ್ರೀ ವರದರಾಜ ಚಂದ್ರಗಿರಿ**, ಪದ್ಮುಂಜ - **ಶ್ರೀಮತಿ ಅಮೃತಾ ಡೀಕಯ್ಯ** ಸುಬ್ರಹ್ಮಣ್ಯ-**ಶ್ರೀ ಮಹಾಬಲ ಶೆಟ್ಟಿ**, ನೆಲ್ಯಾಡಿ-**ಶ್ರೀ ಅಬ್ರಹಾಂ ವರ್ಗೀಸ್**, ಪಂಜ-**ಶ್ರೀ ಟಿ.ಜಿ. ಮುಡೂರು**, ಈಶ್ವರಮಂಗಳ - **ಶ್ರೀ ಕೆ. ಸಿ. ಪಾಟಾಳಿ; ಶ್ರೀ ಸಂಜೀವ ಶೆಟ್ಟಿ**, ಉಳ್ಳಾಲ-ಕೋಟೆಕಾರು-**ಶ್ರೀ ಕೆ. ಆರ್. ಚಂದ್ರ**, ಕಟೀಲು-**ಶ್ರೀ ಉಮೇಶ ರಾವ್ ಎಕ್ಕಾರು**, ಪಾಣಾಜೆ-**ಶ್ರೀ ಕೃಷ್ಣಭಟ್**, ಬೆಳ್ಳಾರೆ-**ಶ್ರೀಮತಿ ರಾಜೀವಿ ರೈ** ನಾರಾವಿ - **ಶ್ರೀ ಸದಾನಂದ ನಾರಾವಿ.**

ಉಡುಪಿ ಗೋವಿಂದ ಪೈ ಸಂಶೋಧನ ಕೇಂದ್ರದವರು ಮತ್ತು ಪ್ರಾದೇಶಿಕ ಜಾನಪದ ರಂಗಕಲೆಗಳ ಅಧ್ಯಯನ ಕೇಂದ್ರದವರು ಈ ಯೋಜನೆಗೆ ಸಂಸ್ಥೆಯ ವಾಹನವನ್ನು ಒಳಸರಿ ದಿನಗಳಂದು ಉಚಿತವಾಗಿ ನೀಡಲು ಒಪ್ಪಿಕೊಂಡದ್ದಕ್ಕೆ ಕೃತಜ್ಞತೆ ಸಲ್ಲಿಸಲಾಯಿತು.

ಸಮಾಲೋಚನ ಸಭೆಯಲ್ಲಿ ಉಪಸ್ಥಿತರಿದ್ದವರು. ಪ್ರೊ. ಬಿ. ಎ. ವಿವೇಕ ರೈ, ಡಾ. ಪಾಲ್ತಾಡಿ ರಾಮಕೃಷ್ಣ ಆಚಾರ್, ಡಾ. ವಾಮನ ನಂದಾವರ, ಶ್ರೀಮತಿ ಕೆ. ಲೀಲಾವತಿ, ಶ್ರೀಗಳಾದ ವೆಂಕಟರಾಜ ಪುಣಿಂಚತ್ತಾಯ, ಶ್ರೀ ದಾಮೋದರ ನಿಸರ್ಗ, ಅಡ್ಯಾರು ಮಹಾಬಲ ಶೆಟ್ಟಿ, ಎಸ್. ಎ. ಕೃಷ್ಣಯ್ಯ, ಪ್ರೊ. ಮುರಳೀಧರ ಉಪಾಧ್ಯ, ಹರೀಶ್ ಹೆಗ್ಡೆ, ಪಿ. ಕಮಲಾಕ್ಷ, ಶ್ರೀಮತಿ ಜಾನಕಿ ಬ್ರಹ್ಮಾವರ, ಶ್ರೀಮತಿ ಅಮೃತಾ ಡೀಕಯ್ಯ, ಶ್ರೀ ವಿಠಲ ಕಬಕ, ಎಂ. ವಿಠಲ ಪುತ್ತೂರು, ಚಂದ್ರಹಾಸ ಕಣಂತೂರು, ಭಾಸ್ಕರ ಕುಲಾಲ್ ಬರ್ಕೆ, ಭೋಜರಾಜ ಕಡಂಬ, ಕೆಲಿಂಜ ಸೀತಾರಾಮ ಆಳ್ವ, ತುಕಾರಾಂ ಪೂಜಾರಿ, ಗಂಗಾಧರ ಕಿದಿಯೂರು, ಗಣೇಶ ಪ್ರಸಾದ ಪಾಂಡೇಲು, ಪಿ. ಎಸ್. ರಾವ್, ಎಂ. ನಾರಾಯಣ ದೇವಾಡಿಗ.

ಅಕಾಡೆಮಿಯ ರಿಜಿಸ್ಟಾರ್ ಆರಂಭದಲ್ಲಿ ಸ್ವಾಗತಿಸಿದರು. ಕೊನೆಯಲ್ಲಿ ಅಕಾಡೆಮಿಯ ಸದಸ್ಯೆ ಶ್ರೀಮತಿ ಕೆ. ಲೀಲಾವತಿ ಸೊಲ್ಮೆ ಸಂದಾಯ ಮಾಡಿದರು.

ತುಳು-ಕೊಂಕಣಿ ಬಾಂಧವ್ಯ

27 ಜುಲಾಯಿ 1997

ಉದ್ಘಾಟನೆ:

ಭಾಷಿಕ ವ್ಯತ್ಯಾಸ ಮಾನವನ ಜೀವನದಲ್ಲಿ ಗೋಡೆಗಳನ್ನು ಕಟ್ಟಬಾರದು. ಅದು ಸೇತುವೆಗಳನ್ನು ನಿರ್ಮಿಸಬೇಕು. ತುಳುವರು ಮತ್ತು ಕೊಂಕಣಿಗರು ಮಾನವತೆಯ ನೆಲೆಯಲ್ಲಿ ಬಾಳುವುದು ಮುಖ್ಯ. ಇಲ್ಲಿ ಭಾಷೆ ಗೌಣ, ಮಾನವತೆ ಮುಖ್ಯ ಎಂದು ಅಖಿಲ ಭಾರತ ಕೊಂಕಣಿ ಪರಿಷತ್ತಿನ ಅಧ್ಯಕ್ಷರೂ ಕರ್ನಾಟಕ ವಿಶ್ವವಿದ್ಯಾನಿಲಯ ಧಾರವಾಡ ಇಲ್ಲಿಯ ಭಾಷಾ ವಿಜ್ಞಾನ ಪ್ರಾಧ್ಯಾಪಕರೂ ಆದ ಡಾ. ವಿಲಿಯಂ ಮಾಡ್ತಾ ವಿಟ್ಲ ಅವರು ಇಲ್ಲಿ ಹೇಳಿದ್ದಾರೆ.

ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ಮತ್ತು ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿಯ ಜಂಟಿ ಆಶ್ರಯದಲ್ಲಿ ಬಂಟ್ವಾಳದ ಶ್ರೀ ಯಶವಂತ ವ್ಯಾಯಾಮ ಶಾಲೆಯಲ್ಲಿ ಜರಗಿದ ಒಂದು ದಿನದ ತುಳು-ಕೊಂಕಣಿ ಬಾಂಧವ್ಯ ಕಾರ್ಯಕ್ರಮದ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆಯನ್ನು ಅವರು ವಹಿಸಿದ್ದರು.

ಸಮಾಜದಿಂದ ಭಾಷೆ ಹುಟ್ಟುತ್ತದೆ ಹೊರತು ಭಾಷೆಯಿಂದ ಸಮಾಜ ಹುಟ್ಟುವುದಿಲ್ಲ. ಮಾನವ ಭಾಷೆ ಸಾರ್ವತ್ರಿಕವಾಗಿ ಒಂದೇ ಆಗಿದ್ದರೂ ಸಾಮಾಜಿಕ ಪರಿಸರದಿಂದಾಗಿ ಭಿನ್ನತೆಯನ್ನು ಪಡೆದಿದೆ. ಭಾಷಾ ಭಿನ್ನತೆಗಳ ಅಂತಸ್ತರದಲ್ಲಿ 'ಸಾಮಾನ್ಯತೆ'ಯೇ ಭಾಷಾ ಬಾಂಧವ್ಯದ ತಿರುಳು ಎಂದು ಅವರು ವಿಶ್ಲೇಷಿಸಿದರು.

ಅಭಿವ್ಯಕ್ತಪಡಿಸಬೇಕಾದ ಆಶಯ ಒಂದೇ ಇದ್ದರೂ ಅಭಿವ್ಯಕ್ತಿ ರೂಪಗಳು ಮಾತ್ರ ಭಿನ್ನವಾಗಿರುತ್ತವೆ. ಈ ಸಾಮಾನ್ಯ ಅಂತಸ್ತರವನ್ನು ಮಾನವ ಭಾಷೆ ಎಂದು ಕರೆದು ಅದು ಒಂದು ಎಂದು ಪರಿಗಣಿಸಿದಾಗ ಅದರ ಬಹುಸ್ತರ ರೂಪಗಳು, ಸಾಮಾಜಿಕ ಭಾಷೆಗಳು ಅವು ತುಳು-ಕೊಂಕಣಿ ಹೀಗೆ ಅನೇಕ ಎಂದು ಇಟ್ಟುಕೊಂಡರೆ ಈ ಅನೇಕತೆ ಏಕತೆಯ ಅರ್ಥದಲ್ಲಿ ಇರುವುದರಿಂದ ಭಿನ್ನತೆಯ ಜೊತೆಗೆ ಅವುಗಳ ಒಳಗೆ ಬಾಂಧವ್ಯ ಸಹಜವಾಗಿ ಇರುತ್ತದೆ. ಹೀಗೆ ಭಾಷಾ ಸಾರ್ವತ್ರಿಕಗಳು ವಿಶಿಷ್ಟ ರೂಪದಲ್ಲಿ ಪ್ರಕಟಗೊಳ್ಳುತ್ತವೆ. ಇದೇ ಭಾಷಾ ವೈವಿಧ್ಯಕ್ಕೆ ಕಾರಣ ಎಂದು ಅವರು ಅಭಿಪ್ರಾಯಪಟ್ಟರು.

ಸಮಗ್ರ ಜನತೆಯ ಅಭಿವೃದ್ಧಿಗೆ ಶೋಷಣೆರಹಿತ ಸಮಾಜ ಕಟ್ಟುವಲ್ಲಿ ಭಾಷಾ ಚೌಕಟ್ಟು ಮೀರಿ ಮಾನವ ವಲಯದಲ್ಲಿ ಬೆರೆತು, ಕಲೆತು ಪ್ರಗತಿಪರವಾಗಿ ಕೂಡಿಕೊಂಡು ದುಡಿಯುವುದೇ ಭಾಷಾ ಬಾಂಧವ್ಯದ ಗುರಿ. ಇಂತಹ ಮಾನವ ಜೀವನದ ಗುರಿ ಸಾಧಿಸಲು ಇಂದಿನ ತುಳು-ಕೊಂಕಣಿ ಬಾಂಧವ್ಯದ ಈ ಸಮಾರಂಭ ಸ್ಫೂರ್ತಿಯಾಗಲಿ ಎಂದು ಅವರು ಹಾರೈಸಿದರು.

ಕೊಂಕಣಿಗೆ ಏಕರೂಪದ ಲಿಪಿ ಅಗತ್ಯ. ಇದರಿಂದಾಗಿ ಕೊಂಕಣಿ ಸಂಸ್ಕೃತಿ, ನಡವಳಿಕೆಗಳನ್ನು ಹಿಡಿದಿಟ್ಟುಕೊಳ್ಳಲು ಸಾಧ್ಯ ಎಂದು ತುಳು-ಕೊಂಕಣಿ ಬಾಂಧವ್ಯ ಕಾರ್ಯಕ್ರಮವನ್ನು ದೀಪ ಬೆಳಗಿಸಿ ಉದ್ಘಾಟಿಸಿದ ಪ್ರಸಿದ್ಧ ತುಳು ಸಾಹಿತಿ ಶ್ರೀ ಏರ್ಯ ಲಕ್ಷ್ಮೀನಾರಾಯಣ ಆಳ್ವ ಅವರು ಹೇಳಿದರು.

ಸತ್ವಯುತವಾದ ಜನಜೀವನವನ್ನು ನಡೆಸುವಂತಹ ಸಾಂಸ್ಕೃತಿಕ ಶಕ್ತಿ ಇರುವ ತುಳು ಸಂಸ್ಕೃತಿಯ ಬಗ್ಗೆ ಕೊಂಕಣಿಗರು ಮಹತ್ವಪೂರ್ಣ ಕೊಡುಗೆ ನೀಡಿದ್ದಾರೆ. ಆದರೆ ತುಳುವರು ಕೊಂಕಣಿಗಳ ಬಗ್ಗೆ ಅಂಥ ಕೊಡುಗೆ ನೀಡಿಲ್ಲ ಎಂದು ಅವರು ಅಭಿಪ್ರಾಯಪಟ್ಟರು.

ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಸ್ವಾತಂತ್ರ್ಯ ಹೋರಾಟಗಾರ, ಸಾಮಾಜಿಕ ಕಾರ್ಯಕರ್ತ ಡಾ. ಅಮ್ಮೆಂಬಳ ಬಾಳಪ್ಪ ಅವರು ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ಹೊರತರುವ ತ್ರೈಮಾಸಿಕ 'ಮದಿಪು' ಇದರ ಎರಡನೇ ವರ್ಷದ ಪ್ರಥಮ ಸಂಚಿಕೆಯನ್ನು ಬಿಡುಗಡೆಗೊಳಿಸಿದರು. ಭಾಷೆ ಮನುಷ್ಯ ಮನುಷ್ಯರನ್ನು ಹತ್ತಿರ ತಂದು ದೇಶಾಭಿಮಾನ ಮೂಡಿಸುವ ಸಾಧನವಾಗಬೇಕು ಎಂದು ಅವರು ಹೇಳಿದರು.

ಶ್ರೀ ರಾಘವೇಂದ್ರ ರಾವ್ ಅವರ ಕೊಂಕಣಿ ಹಾಡು ಮತ್ತು ಕು. ಸುರೇಖ ಕವತ್ತಾರು, ನವೀನ್ ಕುಮಾರ್ ಜೈನ್ ಅವರ ತುಳು ಹಾಡಿನೊಂದಿಗೆ ಕಾರ್ಯಕ್ರಮ ಆರಂಭವಾಯಿತು.

ಕರ್ನಾಟಕ ಕೊಂಕಣಿ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಶ್ರೀ ಬಸ್ತಿ ವಾಮನ ಶೆಣೈ ಅವರು ಸ್ವಾಗತಿಸಿದರು. ತುಳು ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಪ್ರೊ. ಬಿ. ಎ. ವಿವೇಕ ರೈ ಅವರು ಪ್ರಸ್ತಾವನೆಗೈದರು. ತುಳು ಸಾಹಿತ್ಯ ಅಕಾಡೆಮಿ ರಿಜಿಸ್ಟ್ರಾರ್ ಡಾ. ಪಾಲ್ತಾಡಿ ರಾಮಕೃಷ್ಣ ಆಚಾರ್ ಅವರು 'ಮದಿಪು' ಸಂಚಿಕೆ ಬಗ್ಗೆ ಮಾಹಿತಿ ನೀಡಿದರು. ಕೊಂಕಣಿ ಸಾಹಿತ್ಯ ಅಕಾಡೆಮಿ ರಿಜಿಸ್ಟ್ರಾರ್ ಶ್ರೀ ಎಂ. ಎಸ್. ಚಂದ್ರಪ್ಪ ಅವರು ವಂದಿಸಿದರು. ಡಾ. ವಾಮನ ನಂದಾವರ ಅವರು ಕಾರ್ಯಕ್ರಮ ನಿರ್ವಹಿಸಿದರು.

ವಿಚಾರಗೋಷ್ಠಿ:

ತುಳು-ಕೊಂಕಣಿ ಸಾಹಿತ್ಯದ ಸಂಬಂಧ ಬಗ್ಗೆ ವಿಮರ್ಶಕ ಪ್ರೊ. ಮುರಳೀಧರ ಉಪಾಧ್ಯ, ತುಳು-ಕೊಂಕಣಿ ಸಾಂಸ್ಕೃತಿಕ ಸಂಬಂಧದ ಬಗ್ಗೆ ರೆ. ಫಾ. ಹೆನ್ರಿ ಡಿ'ಸೋಜಾ ಅವರು ಪ್ರಬಂಧ ಮಂಡಿಸಿದರು. ವಿಚಾರ ಗೋಷ್ಠಿಯ ಅಧ್ಯಕ್ಷತೆ ವಹಿಸಿದ್ದ ಹಿರಿಯ ಸಂಶೋಧಕ ಶ್ರೀ ಎಂ. ಮುಕುಂದ ಪ್ರಭು ಅವರು ತುಳು - ಕೊಂಕಣಿ ಭಾಷಾ ಸಂಬಂಧ ಬಗ್ಗೆ ಪ್ರಬಂಧ ಮಂಡಿಸಿದರು.

ಕವಿಗೋಷ್ಠಿ:

ಅಮೃತ ರಸದ ಬೆಸುಗೆಯಂತೆ ಇಂತಹ ಬಾಂಧವ್ಯ ಕಾರ್ಯಕ್ರಮ ಸಾಮರಸ್ಯದ ಬದುಕಿಗೆ ಪೂರಕವಾದುದು ಎಂದು ಮಾಜಿ ಶಾಸಕ, ಕವಿ ಶ್ರೀ ಬಿ. ಎಂ. ಇದಿನಬ್ಬ ಅವರು ಈ ಸಂದರ್ಭದಲ್ಲಿ ಜರಗಿದ ಕವಿಗೋಷ್ಠಿಯ ಅಧ್ಯಕ್ಷ ಸ್ಥಾನದಿಂದ ಹೇಳಿದರು ಮತ್ತು ಅವರು ತಮ್ಮ ಕವನವನ್ನು ವಾಚಿಸಿದರು.

ಕವಿಗೋಷ್ಠಿಯಲ್ಲಿ ಭಾಗವಹಿಸಿದ್ದ ಕವಿಗಳಾದ ಶ್ರೀ ಈಶ್ವರ ಭಟ್ ಪುತ್ತಿಗೆ, ಶ್ರೀಮತಿ ವಸಂತಿ ಆರ್. ನಾಯಕ್, ಶ್ರೀಮತಿ ಕ್ಯಾಥರಿನ್ ರಾಡ್ರಿಗಸ್, ಶ್ರೀ ಮೌವ್ರಿಸ್ ಶಾಂತಿಪುರ, ಶ್ರೀ ತಿಲಕನಾಥ ಮಂಜೇಶ್ವರ, ಶ್ರೀ ಎಚ್. ರಾಘವೇಂದ್ರ ರಾವ್, ಶ್ರೀಮತಿ ದೇವಿಕಾ ನಾಗೇಶ್, ಶ್ರೀ ಆನ್ನಿಪಾಲಡ್ಕ, ಶ್ರೀ ಜೊಸ್ಸಿ ಪಿಂಟೋ ಅವರು ತಮ್ಮ ಕವನವನ್ನು ವಾಚಿಸಿದರು. ಕಾರ್ಯಕ್ರಮವನ್ನು ಶ್ರೀಮತಿ ಲೀಲಾವತಿ ಅವರು ನಿರೂಪಿಸಿದರು.

ಸಮಾರೋಪ:

ಕೊಂಕಣಿ ಸಾಹಿತ್ಯ ರಚನೆಗೆ ಕೊಂಕಣಿಗರು ಮುಂದೆ ಬರಬೇಕು. ಕೇರಳದಲ್ಲಿ, ಗೋವಾದಲ್ಲಿ ಕೊಂಕಣಿ ಸಾಹಿತ್ಯ ಸಮೃದ್ಧವಾಗಿದೆ. ಕರ್ನಾಟಕದಲ್ಲೂ ಈ ಕೆಲಸ ಆಗಬೇಕು.

ಬೇರೆ ಭಾಷೆಯವರೂ ಕೊಂಕಣಿ ಸಾಹಿತ್ಯ ರಚಿಸಬೇಕು ಎಂದು ಮಣಿಪಾಲದ ಐ.ಸಿ.ಡಿ.ಎಸ್.ನ ಅಧ್ಯಕ್ಷ ಶ್ರೀ ಕೆ.ಕೆ. ಪೈ ಅವರು ಹೇಳಿದ್ದಾರೆ.

ಬಂಟ್ವಾಳದ ಶ್ರೀ ಯಶವಂತ ವ್ಯಾಯಾಮ ಶಾಲೆಯಲ್ಲಿ ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ಮತ್ತು ಕೊಂಕಣಿ ಸಾಹಿತ್ಯ ಅಕಾಡೆಮಿ ಸಂಘಟಿಸಿದ 'ತುಳು-ಕೊಂಕಣಿ ಬಾಂಧವ್ಯ' ಕಾರ್ಯಕ್ರಮದ ಸಮಾರೋಪ ಸಮಾರಂಭದ ಅಧ್ಯಕ್ಷತೆಯನ್ನು ಅವರು ವಹಿಸಿದ್ದರು.

ಕೊಂಕಣಿ-ತುಳು ಬಾಂಧವ್ಯ ಈ ಜಿಲ್ಲೆಯಲ್ಲಿ ಶತ-ಶತಮಾನಗಳಿಂದಲೂ ಜನಜೀವನದಲ್ಲಿ ಹಾಸುಹೊಕ್ಕಾಗಿದೆ. ಈ ಎರಡೂ ಭಾಷೆಯ ಜನರ ಸಹಬಾಳ್ವೆ, ಈ ಜಿಲ್ಲೆಯ ವೈಶಿಷ್ಟ್ಯ ಎಂದ ಅವರು ತುಳು-ಕೊಂಕಣಿ ಅಕಾಡೆಮಿಗಳ ರಚನೆಯಿಂದ ಕರ್ನಾಟಕದಲ್ಲಿ ಈ ಭಾಷೆಗಳು ನವಜಾಗೃತಿ ಮೂಡಿಸಿವೆ ಎಂದರು.

ತುಳುವಿನಲ್ಲಿ ವಿಶಿಷ್ಟ ಸಂಶೋಧನೆ ಜಿಲ್ಲೆಯಲ್ಲಿ ಆಗಿದೆ. ಕಳೆದ 17 ವರ್ಷಗಳ ನಿರಂತರ ಅಧ್ಯಯನದ ಫಲವಾಗಿ ಉಡುಪಿಯ ಗೋವಿಂದ ಪೈ ಸಂಶೋಧನಾ ಕೇಂದ್ರದಲ್ಲಿ ತುಳು ನಿಘಂಟಿನಂತಹ ಚಾರಿತ್ರಿಕ ದೊಡ್ಡ ಸಾಧನೆ ಎಂದರು. ಟಿ.ಎ. ಪೈ ಪ್ರತಿಷ್ಠಾನದ ವತಿಯಿಂದ ಕೊಂಕಣಿ ನಿಘಂಟು ರಚಿಸುವ ಯೋಜನೆಯನ್ನು ಆಯೋಜಿಸಲಾಗಿದೆ ಎಂದು ಅವರು ಪ್ರಕಟಿಸಿದರು.

ಜನರ ಸಂಸ್ಕಾರ ತಿಳಿಸುವ ಭಾಷೆಗೆ ವಿಶಿಷ್ಟ ಸ್ಥಾನವಿದೆ. ಎಲ್ಲಾ ಭಾಷೆಗೂ ವೈಶಿಷ್ಟತೆ ಇದೆ. ಶಕ್ತಿ ಇದೆ. ಭಾಷಾ ಪ್ರೇಮ, ಸ್ವಾಭಿಮಾನ ಬೆಳೆಸಬೇಕು, ಯಾವ ಕಾರಣಕ್ಕೂ ಭಾಷಾ ದ್ವೇಷ ಸಲ್ಲದು. ಜನರ ಹಿತ ಸಾಧಿಸುವುದೇ ಸಾಹಿತ್ಯದ ಉದ್ದೇಶವಾಗಬೇಕು ಎಂದು ಸಮಾರೋಪ ಭಾಷಣ ಮಾಡಿದ ಪ್ರಸಿದ್ಧ ಹರಿದಾಸ ಶ್ರೀ ಭದ್ರಗಿರಿ ಅಚ್ಯುತದಾಸರು ಹೇಳಿದರು. ತುಳು-ಕೊಂಕಣಿ ಭಾಷಾ ಬಾಂಧವ್ಯವನ್ನು ಸತ್ವಪೂರ್ಣಗೊಳಿಸುವ, ಭಾಷೆಯನ್ನು ಸಮೃದ್ಧ ಗೊಳಿಸುವ ಕೆಲಸ ಅಕಾಡೆಮಿಯಿಂದ ತ್ವರಿತವಾಗಿ ಆಗಲಿ ಎಂದು ಅವರು ಹಾರೈಸಿದರು.

ಗಾಂಧೀಜಿ ಅವರ ಹೋರಾಟದ ಮುಖ್ಯ ಗುರಿ ನಮ್ಮ ಸಂಸ್ಕೃತಿಯ ರಕ್ಷಣೆಯಾಗಿತ್ತು. ಬಂಟ್ವಾಳಕ್ಕೆ ಗಾಂಧೀಜಿ ಅವರ ಭೇಟಿ ಇಲ್ಲಿಯ ತುಳು-ಕೊಂಕಣಿಗರ ಬಾಂಧವ್ಯಕ್ಕೆ ಪ್ರೇರಣೆಯಾಗಿತ್ತು ಎಂದು ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿದ ಪತ್ರಕರ್ತ ಪ್ರಾಧ್ಯಾಪಕ ಶ್ರೀ ಕೆ. ಬಾಲಕೃಷ್ಣ ಗಟ್ಟಿ ಅವರು ಹೇಳಿದರು.

ಈ ಪ್ರದೇಶದ ಸಂಸ್ಕೃತಿಯನ್ನು ಉಳಿಸುವ ಬಹುದೊಡ್ಡ ಹೊಣೆಗಾರಿಕೆ ನಮ್ಮ ಮುಂದಿನ ಪೀಳಿಗೆಗೆ ಇದೆ. ಈ ನಿಟ್ಟಿನಲ್ಲಿ ಕೊಂಕಣಿ-ತುಳುವರು ಸಂಸ್ಕೃತಿ ರಕ್ಷಣೆಯ ಹೋರಾಟದ ಜವಾಬ್ದಾರಿ ವಹಿಸಬೇಕು ಎಂಬ ಆಶಯವನ್ನು ಅವರು ವ್ಯಕ್ತಪಡಿಸಿದರು.

ಕೊಂಕಣಿ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷ ಶ್ರೀ ಬಸ್ತಿವಾಮನ ಶೆಣೈ ಸ್ವಾಗತಿಸಿದರು. ಎರಡೂ ಅಕಾಡೆಮಿಯ ಪರವಾಗಿ ಪ್ರೊ. ಬಿ. ಎ. ವಿವೇಕ ರೈ ಅವರು ಸಮಾರೋಪದ ಮಾತುಗಳನ್ನು ಆಡಿದರು. ತುಳು ಅಕಾಡೆಮಿ ರಿಜಿಸ್ಟ್ರಾರ್ ಡಾ. ಪಾಲ್ತಾಡಿ ರಾಮಕೃಷ್ಣ ಆಚಾರ್ ಅವರು ವಂದಿಸಿದರು. ಶ್ರೀ ಎಚ್. ರಾಘವೇಂದ್ರ ರಾವ್ ಕಾರ್ಯಕ್ರಮ ನಿರೂಪಿಸಿದರು.

ತುಳು ಸುದ್ದಿ

ಕಣಂತೂರು ಕ್ಷೇತ್ರ ಪರಿಚಯ ಬೂಕುಬುಡುಗಡೆ

ಶ್ರೀ ಚಂದ್ರಹಾಸ ಕಣಂತೂರು ಬರೆಯಿನ 'ಕಣಂತೂರು ಧರ್ಮ ಅರಸು ಶ್ರೀ ತೋಡುಕುಕ್ಕಿನಾರ್' ಕ್ಷೇತ್ರ ಪರಿಚಯ ಬೂಕು ಈ ಒರ್ಸೊದ ಕಣಂತೂರು ವರ್ಸಾದಿ ಜಾತ್ರೆದಾನಿ ಬುಡುಗಡೆ ಆಂಡ್. ಈ ಬೂಕುದ ಬುಡುಗಡೆ ಮಲ್ತಿನ ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿದ ಸದಸ್ಯೆ ಪ್ರೊ. ಅಮೃತ ಸೋಮೇಶ್ವರೆರ್ ಕೇಂಡ್‌ದ್, ನಾಡ್‌ದ್ ಪೆಜ್ಜಿದ್ ಒಟ್ಟು ಮಲ್ತಿನ ಮಾಹಿತಿಲೆ ಆಧಾರೊಡು ಎಡ್ಡೆ ಅಧ್ಯಯನ ರೂಪೊಡು ಮಲ್ತ್‌ನವು ಜಾನಪದ ಕ್ಷೇತ್ರಗೊಂಜಿ ಮಲ್ಲ ಕಾನಿಗೆಂದ್ ಅಭಿಪ್ರಾಯ ಕೊರ್ಯೆರ್. ಈ ಬೂಕುದ ಪರಿಚಯ ಮಲ್ತ್ ಕೊರಿನ ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿದ ಸದಸ್ಯೆ ಡಾ. ವಾಮನ ನಂದಾವರ ಒಂಜಿ ಕ್ಷೇತ್ರದ ಅಧ್ಯಯನ ಈತ್ ಸಮಗ್ರವಾದ್, ಸಂಶೋಧನಾತ್ಮಕವಾದ್ ಬತ್ತಿನವು ಉಂದುವೇ ಸುರುತ್ತವು ಬೊಕ್ಕ ಉಂದು ಪೊಸ ಪೀಳಿಗೆಗೊಂಜಿ ಮಾದರಿ ಕೃತಿಂದ್ ಬೂಕುದ ಮೇಲ್ಮೆನ್ ದೆರ್ತ್ ಪತ್ತ್‌ದ್ ಪಂಡೆರ್. ಹಿರಿಯ ವಿದ್ವಾಂಸೆ ವಿದ್ವಾನ್ ಜೇಂಕಳ ಶ್ರೀನಿವಾಸ ಭಟ್ರ್ ಮಲ್ಲ ಬಿನ್ನೆರಾದ್ ಊರುದ ಜಾತ್ರೆದ ಪೊರ್ತುಗು ಇಂಚಿತ್ತಿ ಕ್ಷೇತ್ರ ಪರಿಚಯದ ಬೂಕುನ್ ಬರೆದ್ ಪ್ರಕಟ ಮಲ್ತಿನ ಲೇಖಕೆರೆನ್ ಬೊಕ್ಕ ಪ್ರಕಾಶಕೆರೆನ್ ಪುಗರ್‌ದ್ ಎಡ್ಡೆ ಮದಿಪು ಕೊರ್ಯೆರ್. ಬೂಕುದ ಪ್ರಕಾಶಕೆರ್ ಬೊಕ್ಕ ಕಣಂತೂರು ಕ್ಷೇತ್ರದ ಅನುವಂಶೀಯ ಮೊಕ್ತೇಸರೆ ಶ್ರೀ ಬಾಲಕೃಷ್ಣ ಪೊಯ್ಯತ್ತಾಯೆರ್ ಬಿನ್ನೆರೆನ್ ಎದಿಕೊಂಡೆರ್. ಲೇಖಕೆ ಶ್ರೀ ಚಂದ್ರಹಾಸ ಕಣಂತೂರು ಇಂಚಿತ್ತಿ ಬೂಕುನು ಬರೆಯೆರೆ ಬೊಕ್ಕ ಪ್ರಕಟ ಮಲ್ಪೆರೆ ಸಾಧ್ಯ ಆಯಿನೆಕ್ಕ್ ಸೊಲ್ಮೆ ಸಂದಾಯೆರ್.

ಕರಿಪೋಯಿ ಚೇತನೊಲೆಗ್ ಬಕ್ತಿದ ಸೊಲ್ಮೆಲು

● ಸುಮಾರ್ ಐವಗುಲಾ ಮಿಕ್ಕ್‌ದ್ ಸಾಮಾಜಿಕ, ಚಾರಿತ್ರಿಕ ಬೊಕ್ಕ ಪೌರಾಣಿಕ ನಾಟಕೊಲೆನ್ ಬರೆದ್ ನಿರ್ದೇಶನ ಮಲ್ತ್‌ದ್, ಅಭಿನಯ ಮಲ್ತ್‌ದ್ ತುಳು ನಾಟಕ ರಂಗಭೂಮಿಗ್ ಅಳಿ ಇಜ್ಜಂದಿ ಒಂಜಿ ಮುದೆಲ್ ಪಾಡ್ದ್ ಕೊರ್ತಿ ಬಿ. ರಾಮ ಕಿರೋಡಿಯನ್ (1923-1997)5ನೆ ಸಪ್ಪಂಬರ 1997 ನೆದಾನಿ ಸೊರ್ಗಸಂದಿಯೆರ್ಂದ್ ಪನ್ಪೆರೆ ಮಸ್ತ್ ಬೇಜಾರ್ ಆವೊಂದುಂಡು. ಮೆರೆನ ಕಾಂಪರನ ಕಟಿಪಿಟಿ ಈ ಪ್ರಾಯೊಡುಲಾ ಬರವಾ? ಸರ್ಪಸಂಕಲೆ ನಾಟಕೊಲು ಪ್ರಕಟ ಆತ್ಂಡ್. ಆಂಡ ಬೇತೆ ನಮೂನೆದ 52 ನಾಟಕೊಲು ಅಚ್ಚಿದಲ್ಲ್ ತೂವಂದೆ ಒರಿತೊ. ಮಸ್ತ್ ಸಂಖ್ಯೆಡ್ ರೇಡಿಯೊ ನಾಟಕ ಬರೆಯಿನಾರ್, ಸಿನೇಮಾ ರಂಗೊಡು ಬೇಲೆ ಬೆಂದಿನಾರ್ ಬೀಸತ್ತಿ ಬಾಬು, ಬೊಳ್ಳಿದೋಟ, ನ್ಯಾಯೊಗಾದ್ ಎನ್ನ ಬದ್ಕ್, ಸೆಪ್ಪಂಬರ-8, ಬಂಗಾರ್ ಪಟ್ಲೇರ್ ಬೊಕ್ಕ ಸರ್ಪಸಂಕಲೆ ಇಂಚಿತ್ತಿ ನಾಟಕೊಲೆಗ್ ಗೀತೆ ರಚನೆ ಮಲ್ತ್ ಕೊರ್ತಿನವು ಜನಪ್ರಿಯತೆ ಪಡೆತೊ. ಮೆರೆನ ನಾಟಕೊಲೆಡ್ ಸಂಭಾಷಣೆ ಚಿತ್ರಣ, ಬಾಸೆದ ಸೊಗಡ್ ಮುಖ್ಯವಾದುಂಡು. ಸುಮಾರ್ ಅಜಿಪ ಒರ್ಸೊ ತುಳುನಾಟಕ ರಂಗೊಡು ಎಡ್ಡೆ ಬೇಲೆ ಬೆಂದಿನ ಮೆರೆಗ್ ಕರಿ ಒರ್ಸೊ ಕರ್ನಾಟಕ ತುಳುಸಾಹಿತ್ಯ ಅಕಾಡೆಮಿ ಗೌರವ ಪ್ರಸಸ್ತಿ ಕೊರ್ದು ಸನ್ಮಾನ ಮಲ್ತ್‌ದ್ಂಡ್ ರಾಮ ಕಿರೋಡಿಯನ್ ಈತೊರ್ತುಗೆ ಮಸ್ತ್ ಸಂಘ ಸಂಸ್ಥೆಲೆಡ್ದ್

ಇಂಚಿತ್ತಿ ಪ್ರಶಸ್ತಿ, ಬಿರುದು, ಸನ್ಮಾನೊಲೆನ್ ಪಡೆಯಿನಾರ್. ರಾಮ ಕಿರೋಡಿಯೆರ್‍ನ ನಾಟಕ ಕ್ಷೇತ್ರೊಡು ಬೆನ್ಪುನಾಕ್‍ಲೆಗ್ ಒಂಜಿ ಸ್ಫೂರ್ತಿ ಆದ್ ಇತ್ತೆ ಒಂಜಿನೆಂಪು ಆದ್ ಉಪ್ಪುನಾರ್.

- ಕರಿನ ಪತ್ತ್ ಒರ್ಸೊಡ್ದಿಂಚ ವಸಂತ ಕದ್ರಿ ಬಳಗೊಡು ಖಾಯಂ ಹಿನ್ನೆಲೆ ಗಾಯಕೆರಾದ್ ಚಿತ್ರನಟೆ, ನಿರ್ಮಾಪಕೆ ಶ್ರೀ ಕೆ. ಎನ್. ಟೈಲರ್‍ನ ಶ್ರೀ ಗಣೇಶ ನಾಟಕ ಸಭಾತಂಡೊಡು ನಟೆ, ಹಿನ್ನೆಲೆ ಗಾಯಕೆ ಆದ್ ತುಳುನಾಡ್ ಅತ್ತಂದೆ ಮುಂಬಾಯಿ, ಬೆಂಗಳೂರು, ಬೆಳ್ಗಾಂ, ಹುಬ್ಬಳ್ಳಿ ಇಂಚಿತ್ತಿ ಊರುಲೆಡ್ ರಂಗಭೂಮಿದ ತನ ಪ್ರತಿಭೆನ್ ಮೆರೆಯಿಸ ಶ್ರೀ ಭಗವತೀ ಫ್ರೆಂಡ್ಸ್ ಕ್ಲಬ್ ಕದ್ರಿ ಇಂದೆತ ಸಂಚಾಲಕೆ, ಮಲ್ಲಿಕಾ ಕಲಾವೃಂದ ಕದ್ರಿ, ಇಂದೆತ್ತ ಸಾಂಸ್ಕೃತಿಕ ಕಾರ್ಯಕ್ರಮೊಟ್ಟು ಪಾಲ್ ಪಡೆಯಿನ ಮುಕ್ಕಣ್ಣೇಶ್ವರ ನಾಟಕ ಸಭಾ ಕದ್ರಿ ಇಂದೆತ್ತ ಸಕ್ರಿಯ ಸದಸ್ಯೆ ಆದಿತ್ತಿನ ಶ್ರೀ ಸೋಮನಾಥ ಕಲಾ ಭೂಮಿ ಮಂಗಳೂರು ಈ ತಂಡೊಡು ಕರಿನ ಐನಾಜಿ ಒರ್ಸೊಡು ನಟೆ ಆದಿತ್ತಿನ, ಜ್ಯೋತಿ ಇಂಜಿನಿಯರಿಂಗ್ ವರ್ಕ್ಸ್ ಕುಲಶೇಖರೊಡು ಮೆಕ್ಯಾನಿಕ್ ಆದಿತ್ತಿನ ಎಡ್ಡೆ ಪುದರ್ ಪಡೆಯಿ ನಾಟಕ ಕರ್ತೆ, ನಿರ್ದೇಶಕೆ, ನಟೆ, ಹಿನ್ನೆಲೆ ಗಾಯಕೆ ಶ್ರೀ ಶರತ್ ಕುಮಾರ್ ಕದ್ರಿ 5ನನೇ ಆಗಸ್ಟ್ 1997ನೆದಾನಿ ವಾಹನ ಅಪಘಾತೊಡು ದುರ್ಮರಣ ಪಡೆಯೆರ್ ಪನ್ಪೆರೆ ಮಸ್ತ್ ಬೇಜಾರ್ ಆಪೊಂದುಂಡು. ಆರೆನ ಆತ್ಮೊಗು ಶಾಂತಿ ತಿಕ್ಕಡ್ಂದ್ ನಟ್ಟೊನುವ.

ತುಳು ಸುದ್ದಿ

ಕಣಂತೂರು ಕ್ಷೇತ್ರ ಪರಿಚಯ ಗ್ರಂಥ ಬಿಡುಗಡೆ

ಶ್ರೀ ಚಂದ್ರಹಾಸ ಕಣಂತೂರು ಬರೆದ 'ಕಣಂತೂರು ಧರ್ಮ ಅರಸು ಶ್ರೀ ತೋಡ ಕುಕ್ಕಿನಾರ್' ಕ್ಷೇತ್ರ ಪರಿಚಯ ಗ್ರಂಥವು ಈ ಬಾರಿಯ ಕಣಂತೂರು ವಾರ್ಷಿಕ ಜಾತ್ರೆಯ ಸಂದರ್ಭ ಬಿಡುಗಡೆಯಾಯಿತು. ಕೃತಿಯನ್ನು ಬಿಡುಗಡೆಗೊಳಿಸಿದ ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿಯ ಸದಸ್ಯ ಪ್ರೊ. ಅಮೃತ ಸೋಮೇಶ್ವರರು ಲಭ್ಯ ಮಾಹಿತಿ ಮೂಲಗಳಿಂದ ಒಂದು ಕ್ಷೇತ್ರದ ಅಧ್ಯಯನವನ್ನು ಇಷ್ಟು ವಿಸ್ತಾರವಾಗಿ ಮೂಡಿಸಿರುವುದು ಜಾನಪದ ಕ್ಷೇತ್ರಕ್ಕೊಂದು ಕೊಡುಗೆ ಎಂದರು. ಕೃತಿಯನ್ನು ಪರಿಚಯಿಸುತ್ತ ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿಯ ಸದಸ್ಯರಾದ ಡಾ. ವಾಮನ ನಂದಾವರ ಒಂದು ಕ್ಷೇತ್ರದ ಅಧ್ಯಯನ ಇಷ್ಟು ಸಮಗ್ರವಾಗಿ ಬಂದಿರುವುದು ತುಳುವಿನಲ್ಲಿ ಇದೇ ಮೊದಲು ಮತ್ತು ಇಂತಹ ಕೆಲಸ ಹೊಸ ಪೀಳಿಗೆಯ ಯುವ ಜನಾಂಗಕ್ಕೊಂದು ಮಾದರಿ ಎಂದರು ಮುಖ್ಯ ಅತಿಥಿಯಾಗಿದ್ದ ಹಿರಿಯ ವಿದ್ವಾಂಸ ವಿದ್ವಾನ್ ಜೇಂಕಳ ಶ್ರೀನಿವಾಸ ಭಟ್ ಗ್ರಂಥದ ಲೇಖಕರನ್ನೂ ಪ್ರಕಾಶಕರನ್ನೂ ಅಭಿನಂದಿಸಿದರು. ಕೃತಿಯ ಪ್ರಕಾಶಕರೂ ಕಣಂತೂರು ಕ್ಷೇತ್ರದ ಅನುವಂಶೀಯ ಮೊಕ್ತೇಸರ ಶ್ರೀ ಬಾಲಕೃಷ್ಣ ಪೊಯ್ಯತ್ತಾಯರು ಅತಿಥಿಗಳನ್ನು ಸ್ವಾಗತಿಸಿದರು. ಲೇಖಕ ಶ್ರೀ ಚಂದ್ರಹಾಸ ಕಣಂತೂರು ಈ ಕೃತಿಯನ್ನು ಬರೆಯಲು ಮತ್ತು ಪ್ರಕಟಣೆಗೆ ನೆರವಾದವರನ್ನು ಕೃತಜ್ಞತೆಯಿಂದ ಸ್ಮರಿಸಿಕೊಂಡರು.

ಅಗಲಿದ ಗಣ್ಯರಿಗೆ ಶ್ರದ್ಧಾಂಜಲಿ

● 1923ರಲ್ಲಿ ಮಂಗಳೂರು ತಾಲೂಕಿನ ಸಸಿಹಿತ್ತಿಲಿನಲ್ಲಿ ಜನಿಸಿದ ಬಿ.ರಾಮ ಕಿರೋಡಿಯನ್‌ರವರು ತಮ್ಮನ್ನೇ ತಾವು ರೂಪಿಸಿಕೊಂಡ ಸಾಧಕರು. ವಾಡಿಕೆಯ ಲೆಕ್ಕಾಚಾರದಲ್ಲಿ ಕೇವಲ ಪ್ರಾಥಮಿಕ ವಿದ್ಯಾಭ್ಯಾಸ ಪಡೆದ ಇವರು ವೃತ್ತಿಯಲ್ಲಿ ಟೈಲರ್ ಆಗಿ, ಪ್ರವೃತ್ತಿಯಲ್ಲಿ ತುಳು ರಂಗಭೂಮಿಯ ನಿರ್ದೇಶಕ, ನಾಟಕಕಾರ, ನಟರಾಗಿ ವಿಶೇಷ ಸಾಧನೆಯನ್ನು ಮಾಡಿದ್ದಾರೆ, ಸುಮಾರು 50ಕ್ಕೂ ಮಿಕ್ಕಿ ವೈವಿಧ್ಯಪೂರ್ಣ ತುಳು ನಾಟಕಗಳನ್ನು ರಚಿಸಿ ಅವುಗಳಿಗೆ ನಿರ್ದೇಶನವಿತ್ತಿದ್ದಾರೆ. ಈ ನಾಟಕಗಳಲ್ಲಿ ನಟರಾಗಿಯೂ ಅಭಿನಯಿಸಿದ್ದಾರೆ. ಇವರ 'ಕಾಂಪರನ ಕಟಿಪಿಟಿ', 'ಈ ಪ್ರಾಯೊಡ್ಲಾ ಬರವಾ? ಮತ್ತು 'ಸರ್ಪಸಂಕಲೆ' ಎಂಬ ಮೂರು ತುಳು ನಾಟಕಗಳು ಪ್ರಕಟವಾಗಿವೆ. ಇವಲ್ಲದೆ ಇವರು 52ತುಳು ನಾಟಕಗಳು ಪ್ರಕಟವಾಗದೆ ಉಳಿದಿದ್ದು, ರಂಗಭೂಮಿಯಲ್ಲಿ ಪ್ರದರ್ಶನಗೊಂಡು ಜನಮನ್ನಣೆ ಗಳಿಸಿವೆ. ಪೌರಾಣಿಕ, ಚಾರಿತ್ರಿಕ, ಸಾಮಾಜಿಕ ನಾಟಕಗಳನ್ನಲ್ಲದೆ ಹೆಚ್ಚಿನ ಸಂಖ್ಯೆಯಲ್ಲಿ ರೇಡಿಯೊ ನಾಟಕಗಳನ್ನು ಇವರು ರಚಿಸಿದ್ದಾರೆ. ಇವರ ರಚನೆಯಲ್ಲಿ ಸಂಭಾಷಣೆಯ ಚಾತುರ್ಯ, ಸಂಸ್ಕೃತಿ ಚಿತ್ರಣ, ಭಾಷೆಯ, ಸೊಗಡು ಗಮನೀಯ. ಶ್ರೀ ರಾಮ ಕಿರೋಡಿಯನ್‌ರವರು ತುಳು ಸಿನಿಮಾ ರಂಗದಲ್ಲಿ ಸೇವೆಸಲ್ಲಿಸಿದ್ದಾರೆ. ಅವರು ಒಟ್ಟು 6 ತುಳು ಸಿನಿಮಾಗಳಿಗೆ ಗೀತ ರಚನೆ ಮಾಡಿದ್ದು, ಅವು ಬಹಳ ಜನಪ್ರಿಯತೆಯನ್ನು ಗಳಿಸಿವೆ. ಆ ಸಿನಿಮಾಗಳೆಂದರೆ - ಬೀಸತ್ತಿ ಬಾಬು, ಬೊಳ್ಳಿದೋಟ, ನ್ಯಾಯೊಗಾದ್ ಎನ್ನ ಬದ್‌ಕ್, ಸೆಪ್ಟೆಂಬರ್ 8, ಬಂಗಾರ್ ಪಟ್ಲೇರ್ ಮತ್ತು ಸರ್ಪಸಂಕಲೆ. ಸರ್ಪಸಂಕಲೆ ಸಿನಿಮಾಕ್ಕೆ ಚಿತ್ರಕತೆಯನ್ನು ಕೂಡಾ ಬರೆದಿದ್ದಾರೆ. ಮಂಗಳೂರು ಮತ್ತು ಬೆಂಗಳೂರು ಆಕಾಶವಾಣಿ ನಿಲಯಗಳಿಂದ ಮೊದಲು ಪ್ರಸಾರವಾದ ತುಳು ನಾಟಕಗಳು ರಾಮ ಕಿರೋಡಿಯನರವು ಎಂಬುದು ಉಲ್ಲೇಖನೀಯ. ಸುಮಾರು ಆರು ದಶಕಗಳ ಕಾಲ ತುಳು ನಾಟಕ ರಂಗಭೂಮಿಯಲ್ಲಿ ಬಹುಮುಖ ಸೇವೆಯನ್ನು ಸಲ್ಲಿಸಿದ ಬಿ. ರಾಮ ಕಿರೋಡಿಯನರಿಗೆ ಹಲವಾರು ಸಂಘ ಸಂಸ್ಥೆಗಳಿಂದ ಸನ್ಮಾನ ಗೌರವಗಳು ಸಂದಿವೆ. ತುಳು ರಂಗಭೂಮಿಯಲ್ಲಿ ಸೇವೆಸಲ್ಲಿಸುತ್ತಿರುವವರಿಗೆಲ್ಲ ಸ್ಫೂರ್ತಿ ಚೇತನವಾಗಿದ್ದ ರಾಮ ಕಿರೋಡಿಯನ್ ಇಂದು ಒಂದು ನೆನಪು ಮಾತ್ರ ಆಗಿ ಉಳಿದಿದ್ದಾರೆ. ಅವರಿಗೆ ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ಭಕ್ತಿಯ ಶ್ರದ್ಧಾಂಜಲಿ ಅರ್ಪಿಸುತ್ತಿದೆ.

● ಕಳೆದ ಹತ್ತು ವರ್ಷಗಳಿಂದ ವಸಂತ ಕದ್ರಿ ಬಳಗದಲ್ಲಿ ಖಾಯಂ ಹಿನ್ನೆಲೆ ಗಾಯಕರಾಗಿದ್ದ, ಚಿತ್ರ ನಟ, ನಿರ್ಮಾಪಕ ಶ್ರೀ ಕೆ. ಎನ್. ಟೈಲರ್ ಅವರ ಶ್ರೀಗಣೇಶ ನಾಟಕ ಸಭಾ ತಂಡದಲ್ಲಿ ನಟ, ಹಿನ್ನೆಲೆ ಗಾಯಕ ಆಗಿದ್ದ ತುಳುನಾಡು ಮಾತ್ರವಲ್ಲದೆ ಮುಂಬಯಿ, ಬೆಂಗಳೂರು, ಬೆಳಗಾಂ, ಹುಬ್ಬಳ್ಳಿ ಮೊದಲಾದ ಊರುಗಳಲ್ಲಿ ರಂಗಭೂಮಿಯ ತನ್ನ ಪ್ರತಿಭೆಯನ್ನು ಮೆರೆಸಿರುವ ಶ್ರೀ ಭಗವತಿ ಫ್ರೆಂಡ್ಸ್ ಕ್ಲಬ್ ಕದ್ರಿ ಇದರ ಸಂಚಾಲಕ, ಮಲ್ಲಿಕಾ ಕಲಾವೃಂದ ಕದ್ರಿ, ಮುಕ್ಕಣ್ಣೇಶ್ವರ ನಾಟಕ ಸಭಾ ಕದ್ರಿ ತಂಡಗಳಲ್ಲಿ ಸಕ್ರಿಯ ಸದಸ್ಯನಾಗಿದ್ದ ಶ್ರೀ ಸೋಮನಾಥ ಕಲಾಭೂಮಿ ಮಂಗಳೂರು ಈ ತಂಡದಲ್ಲಿ ಕಳೆದ ಐದಾರು ವರ್ಷಗಳಲ್ಲಿ ನಟನಾಗಿದ್ದ ಮತ್ತು ಜ್ಯೋತಿ ಇಂಜಿನಿಯರಿಂಗ್ ವರ್ಕ್ಸ್, ಕುಲಶೇಖರದಲ್ಲಿ ಮೆಕ್ಯಾನಿಕ್ ಆಗಿದ್ದ ಹೆಸರಾಂತ ನಾಟಕಕಾರ, ನಿರ್ದೇಶಕ ನಟ, ಹಿನ್ನೆಲೆಗಾಯಕ ಶ್ರೀ ಶರತ್ ಕುಮಾರ್ ಕದ್ರಿ 5 ಆಗಸ್ಟ್ 1997ರಂದು ವಾಹನಾಪಘಾತದಲ್ಲಿ ದುರ್ಮರಣಕ್ಕೀಡಾಗಿದ್ದಾರೆಂದು ಹೇಳಲು ತೀವ್ರ ದುಃಖವಾಗುತ್ತಿದೆ. ಅವರ ಆತ್ಮಕ್ಕೆ ಶಾಂತಿ ಲಭಿಸಲಿ ಎಂದು ಪ್ರಾರ್ಥಿಸುತ್ತಿದ್ದೇವೆ.

ಮದಿಪುದ ಲೇಖಕೆರ್

ಅಶೋಕ ಆಳ್ವ (ಡಾ)
ಪ್ರಾದೇಶಿಕ ಜಾನಪದ ರಂಗಕಲೆಗಳ
ಅಧ್ಯಯನ ಕೇಂದ್ರ,
ಉಡುಪಿ - 576 102

ಕುಸುಮ ಜಿ.ಪಿ.
ಬ್ಯಾಂಕ್ ಆಫ್ ಬರೋಡ ಸ್ಟಾಫ್
ಕ್ವಾರ್ಟರ್ಸ್-13/60 ನ್ಯಾಶನಲ್ ಹೈಸ್ಕೂಲು ರಸ್ತೆ
ಬಾಂಡುಪ್ (ಪಶ್ಚಿಮ), ಮುಂಬಯಿ-400 078

ಕೇಶವ ಶೆಟ್ಟಿ ಕೆ. ಆದೂರು
ಆದೂರು, ಕಾಸರಗೋಡು-671 543

ತಿಮ್ಮಪ್ಪ ಪೂಜಾರಿ
ತಂದಳಿಗೆ, ಜಪ್ಪಿನಮೊಗರು
ಮಂಗಳೂರು-574 192

ಬ್ರಹ್ಮಾನಂದ ಕೆ.
ಮೈಸೂರು ಫ್ಯಾಶನ್ ಹೌಸ್
ಮಾರ್ಕೆಟ್ ರಸ್ತೆ, ಮಂಗಳೂರು-575 001

ಮಹೇಂದ್ರನಾಥ್ ಕೆ. ಸಾಲೆತ್ತೂರು
ಶ್ರೀ ನಿತ್ಯಾನಂದ ನಿಲಯ
ಸಾಲೆತ್ತೂರು-574 323

ರಘು, ಗುರುಪುರ
ಜೀವರಸಾಯನ ಶಾಸ್ತ್ರವಿಭಾಗ
ಕೆ. ಎಂ. ಸಿ. ಡಯಾಗ್ನಾಸ್ಟಿಕ್ ಸೆಂಟರ್
ಜ್ಯೋತಿ ಟಾಕೀಸಿನ ಎದುರು
ಚಂದ್ರ ಬಿಲ್ಡಿಂಗ್,
ಮಂಗಳೂರು - 575 001

ವಸಂತಕುಮಾರ ಪೆರ್ಲ
ಕಾರ್ಯಕ್ರಮ ನಿರ್ವಾಹಕರು
ಆಕಾಶವಾಣಿ, ಹಾಸನ-573 201

ವಿವೇಕ ರೈ ಬಿ. ಎ. (ಡಾ)
'ಸುಯಿಲ್'
ಜಪ್ಪು ಕುದ್ಪಾಡಿ ರಸ್ತೆ
ಮಂಗಳೂರು-575 002

ಶಕುಂತಳಾ ಭಟ್ ಹಳೆಯಂಗಡಿ
ಗುಡ್ಡೆ ಮನೆ, ಹಳೆಯಂಗಡಿ - 574 146

ಶಂಕರ ಕುಂಜತ್ತೂರು
ಬಾಳೆಹಿತ್ತಿಲು ಮನೆ, ಕುಂಜತ್ತೂರು,
ಮಂಜೇಶ್ವರ - 671 323

ಶೀನಪ್ಪ ಹೆಗ್ಡೆ ಎನ್. ಎ.
ದಿವಂಗತರು.

'ಸಬಿಕು' ಮುಂಬಯಿ
207 C, ಅಜಯ್ ಅಪಾರ್ಟ್‌ಮೆಂಟ್
ಗೋರೆಗಾಂವ್ (ಪೂರ್ವ),
ಮುಂಬಯಿ 400 063